# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026


ಸಂಪುಟ:03 Volume:03 • ಸಂಚಿಕೆ: 05 Issue: 05 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.06.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com


## ಆನಂದ ಬಾಣ




## ಒಳ ಪುಟಗಳಲ್ಲಿ


ಜಪಾನಿನಲ್ಲಿ ಶಿಕ್ಷಕರ ಸ್ಥಾನ ಮಾನ ಪುಟ 2
ದ್ವಂದ್ವ ಮನಸ್ಥಿತಿ ಪುಟ 2
ಆಷಾಢ ಮಾಸ ಬಂದೀತವ್ವ, ಅಣ್ಣ ಬರಲಿಲ್ಲ ಕರಿಯಾಕ! ಪುಟ 3



ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


# ಕೃಷಿ ಉದ್ಯೋಗಕ್ಕೂ ಬರ ನಗರಗಳತ್ತ ಗುಳೆ ಅಕ್ಷರದಿಂದ ಅನ್ನ ಹುಡುಕುವ ಕೆಲಸವಾಗಬೇಕು

## ಡಾ. ಭೀಮೇಶ ಯರಡೋಣಿ ಅಭಿಮತ | ಯುಜಿಸಿ ನೆಟ್, ಕೆ-ಸೆಟ್ ತರಬೇತಿ ಕಾರ್ಯಾಗಾರ ಸಮಾರೋಪ ಅವಕಾಶಗಳನ್ನ ಹುಡುಕಿಕೊಳ್ಳಿ | ಸೋಲುಗಳು ಯಶಸ್ಸಿನ ಮೆಟ್ಟಿಲು | ಸ್ಪರ್ಧಾತ್ಮಕ ಪರೀಕ್ಷೆಗೆ ಪರಿಶ್ರಮ ಅಗತ್ಯ

**ಹಂಪಿ ಟೈಮ್ಸ್ ಹೊಸಪೇಟೆ**

ಇಂದಿನ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲೂ ಕೂಲಿ ಕಾರ್ಮಿಕರು ಉದ್ಯೋಗಕ್ಕೆ ಅಲೆದಾಡುವ ಪರಿಸ್ಥಿತಿ ಎದುರಾಗಿದ್ದು, ಇದರಿಂದ ಹಳ್ಳಿಗರು ನಗರಗಳತ್ತ ಗುಳೆ ಹೋಗುತ್ತಿರುವುದು ನೋವಿನ ಸಂಗತಿ. ಇಂತಹ ಪರಿಸ್ಥಿತಿಯಲ್ಲಿ, ಜೀವನದಲ್ಲಿ ಸಮತೋಲನ ಸಾಧಿಸಲು ಎರಡು ಕೆಲಸಗಳನ್ನು ಮಾಡುವ ಅನಿವಾರ್ಯತೆ ಇದೆ ಎಂದು ಗುಡಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಭೀಮೇಶ ಯರಡೋಣಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು ಪಂಪ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 21 ದಿನಗಳ ಯುಜಿಸಿ ನೆಟ್ ಮತ್ತು ಕೆ-ಸೆಟ್ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಬುಧವಾರ ಮಾತನಾಡಿದರು. "ಅನ್ನದಿಂದ ಅಕ್ಷರ, ಅಕ್ಷರದಿಂದ ಅನ್ನವನ್ನು ಹುಡುಕುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ನಾವು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಯಶಸ್ಸು ಕಾಣಬೇಕು" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

**ಅವಕಾಶಗಳನ್ನು, ಗುರುತಿಸಿ, ಸದುಪಯೋಗಪಡಿಸಿಕೊಳ್ಳಿ**

ಯಲ್ಲಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ರವಿ ಶೇಷಗಿರಿ ಮಾತನಾಡಿ, ಅಧಿಕಾರ ಮತ್ತು ಅಂತಸ್ತುಗಳಿಂದ ವಂಚಿತರಾದರೂ ಅಕ್ಷರಗಳನ್ನು ಹುಡುಕಿಕೊಂಡು ಜೀವನದಲ್ಲಿ ಯಶಸ್ಸು ಕಂಡವರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹೇರಳ ಅವಕಾಶಗಳಿದ್ದು, ಬದುಕಿನ ಮಾರ್ಗಗಳನ್ನು ನಾವೇ



ಗುರುತಿಸಿಕೊಂಡು ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದು ಹೇಳಿದರು.

**ಸೋಲುಗಳು ಯಶಸ್ಸಿನ ಮೆಟ್ಟಿಲು: ಡಾ. ಅಮರೇಶ ಯತಗಲ್**

ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕ ಡಾ. ಅಮರೇಶ ಯತಗಲ್ ಮಾತನಾಡಿ, "ಸೋತವರು ಇತಿಹಾಸವನ್ನು ಸೃಷ್ಟಿಸಿದ್ದಾರೆ. ಸೋತು ಗೆದ್ದ ನಂತರ ಸಿಗುವ ಅನುಭವ ಯಾವ ವಿಶ್ವವಿದ್ಯಾಲಯಗಳಿಂದಲೂ ಸಿಗುವುದಿಲ್ಲ. ಇದಕ್ಕೆ ಸತತ ಪ್ರಯತ್ನ ಅಗತ್ಯ. ಪ್ರಮುಖವಾಗಿ ಅಧಿಕಾರ ಬಂದಾಗ ನಮ್ಮನ್ನು ನಾವೇ ಮರೆಯಬಾರದು. ಬಂದ ಹಾದಿಯನ್ನು ಸದಾಕಾಲವೂ ನೆನಪಿನಲ್ಲಿಟ್ಟುಕೊಂಡು ಜೀವನ ನಡೆಸಬೇಕು. ಅಧಿಕಾರ ಯಾವುದೇ ಇರಲಿ, ಅಲ್ಲಿ ಬದಲಾವಣೆ ತರಬೇಕು. ಇಂತಹ ಕೆಲಸವನ್ನು ಡಾ. ವೆಂಕಟಗಿರಿ ದಳವಾಯಿ ಅವರು ನಿರಂತರವಾಗಿ ಮಾಡುತ್ತಿದ್ದಾರೆ. ನಮ್ಮ ಬಾಲ್ಯದಲ್ಲಿ ಇಂತಹ ಕಾರ್ಯಾಗಾರಗಳು ಮತ್ತು ತರಬೇತಿಗಳು ನಮಗೆ ಇರಲಿಲ್ಲ, ಆದರೆ ನಿಮಗೆ ಅವಕಾಶಗಳು ತುಂಬಾ ಇವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಿ" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

**ವಿದ್ಯಾರ್ಥಿಗಳಿಗೆ ಮಾನಸಿಕ ಹಾಗೂ ಬೌದ್ಧಿಕ ಆತ್ಮವಿಶ್ವಾಸ ತುಂಬುವ ಕಾರ್ಯ: ಡಾ.ವೆಂಕಟಗಿರಿ ದಳವಾಯಿ**

ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ತರಬೇತಿ ಕಾರ್ಯಾಗಾರದ ಸಂಚಾಲಕ ಡಾ. ವೆಂಕಟಗಿರಿ ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. "ಯುಜಿಸಿ ನೆಟ್ ಮತ್ತು ಕೆ-ಸೆಟ್ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಕಾರ್ಯಾಗಾರಗಳ ಸಂಪನ್ಮೂಲ ವ್ಯಕ್ತಿಗಳು ಯಾವುದೇ ಪ್ರತಿಫಲ ಬಯಸದೆ ದೂರದ ಊರುಗಳಿಂದ ಬಂದು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಬೋಧನೆ ಮಾಡಿರುವುದು ಕನ್ನಡ ವಿಶ್ವವಿದ್ಯಾಲಯದ ಮೇಲಿಟ್ಟಿರುವ ಅಭಿಮಾನ. ಇಂತಹ ಕಾರ್ಯಾಗಾರಗಳಿಂದ ವಿದ್ಯಾರ್ಥಿಗಳಿಗೆ ಮಾನಸಿಕ ಹಾಗೂ ಬೌದ್ಧಿಕವಾಗಿ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ಕನ್ನಡ ವಿಶ್ವವಿದ್ಯಾಲಯ ಮಾಡುತ್ತದೆ" ಎಂದು ತಿಳಿಸಿದರು.

**ಸ್ಪರ್ಧಾತ್ಮಕ ಪರೀಕ್ಷೆಗೆ ಆಸಕ್ತಿ, ಪರಿಶ್ರಮ ಅಗತ್ಯ: ಡಾ. ಎಫ್.ಟಿ. ಹಳ್ಳಿಕೇರಿ**

ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಡೀನ್ ಡಾ. ಎಫ್.ಟಿ. ಹಳ್ಳಿಕೇರಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಸ್ಪರ್ಧಾತ್ಮಕ ಪೈಪೋಟಿಯಿದ್ದು, ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ, ಪರಿಶ್ರಮ ಹಾಗೂ ಶ್ರದ್ಧೆಯಿಂದ ಸೂಕ್ತ ರೀತಿಯಲ್ಲಿ ಅಭ್ಯಾಸ ಮಾಡಬೇಕು. ಕನ್ನಡ ವಿಶ್ವವಿದ್ಯಾಲಯವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ವಿಶೇಷವಾಗಿ ಇಂತಹ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ನಿಕಾಯ ಡೀನರು, ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಣ್ಣ ನೀರಾವರಿ ಸಚಿವರಿಗೆ ಅಂಚೆ ಪತ್ರ


## ಕೊಟ್ಟೂರು ಕೆರೆಯ ಕೋಡಿ ದುರಸ್ತಿಗೆ ಆಗ್ರಹ | 854 ಎಕ್ಕರೆ ವಿಸ್ತೀರ್ಣ, 4 ಸಾವಿರ ಎಕರೆ ನೀರಾವರಿ ಸಾಮರ್ಥ್ಯ

**ಹಂಪಿ ಟೈಮ್ಸ್ ಕೊಟ್ಟೂರು**

ಐತಿಹಾಸಿಕ ಕೊಟ್ಟೂರು ಕೆರೆಯ ಕೋಡಿ ಬಾಯಿ(ತಡೆಗೋಡೆ)ಯಲ್ಲಿ 12 ಕ್ಕೂ ಹೆಚ್ಚು ರಂದ್ರಗಳಾಗಿದ್ದು ದುರ್ಬಲ ಸ್ಥಿತಿಯಲ್ಲಿದ್ದು, ಕೂಡಲೇ ಇದನ್ನು ದುರಸ್ಥಿಗೊಳಿಸುವಂತೆ ಒತ್ತಾಯಿಸಿ ಕೊಟ್ಟೂರಿನ "ನಮ್ಮ ಕೆರೆ ನಮ್ಮ ಹಕ್ಕು ಸಂಘಟನೆ" ಸಂಚಾಲಕ ಅಂಚೆ ಕೊಟ್ರೇಶ್, ಸಣ್ಣ ನೀರಾವರಿ ಇಲಾಖೆ ಸಚಿವರು ಎನ್.ಎಸ್ ಭೋಸ ರಾಜು ಅವರಿಗೆ ಅಂಚೆ ಪತ್ರ ಬರೆದಿದ್ದಾರೆ.

ಕಳೆದ ವರ್ಷನೂ ಕೆರೆ ತುಂಬಿದಾಗ ಸಚಿವರ ಗಮನಕ್ಕೆ ತಂದಿದ್ದೆ ಆಗ ಮರಳಿನ ಚೀಲಗಳನ್ನಾಕಿ ಭದ್ರಪಡಿಸಿದ್ದರು, ಈ ಬಾರಿ ಸಂಪೂರ್ಣ ರಿಪೇರಿ ಮಾಡಿಸುವಂತೆ ಪತ್ರದಲ್ಲಿ ಕೋರಿ ಹಕ್ಕೊತ್ತಾಯಿಸಿರುವುದಾಗಿ ಕೊಟ್ರೇಶ್ ಅವರು ಪತ್ರಿಕೆಯೊಂದಿಗೆ ಹಂಚಿಕೊಂಡರು.

ಈ ಕೆರೆಯು 16 ನೇ ಶತಮಾನದ ಶರಣ ಕೊಟ್ಟೂರೇಶ್ವರರ ಕಾಲದಲ್ಲಿಯೂ ಇತ್ತು ಎನ್ನುವುದಕ್ಕೆ ಕೊಟ್ಟೂರೇಶ್ವರನ


ಕೋಡಿ ಬಾವಿಗೆ ಯಾವುದೇ ದುರಸ್ತಿ ಕಾರ್ಯ ಮಾಡಿಲ್ಲ.
ಕೆರೆಗೆ ಕೋಡಿ ಬಾವಿಯು ಅತಿ ಮುಖ್ಯ. ಏನಾದರೂ ಅನಾಹುತವಾದಲ್ಲಿ ಕೆರೆಯು ಅರ್ಧ ನೀರು ಖಾಲಿಯಾಗುತ್ತದೆ. ರೈತರಿಗೆ, ಪಶುಪಕ್ಷಿ ಪ್ರಾಣಿಗಳಿಗೆ ತುಂಬಾ ನಷ್ಟವಾಗುತ್ತದೆ.
= ಅಂಚೆ ಕೊಟ್ರೇಶ.
ನಮ್ಮ ಕೆರೆ- ನಮ್ಮ ಹಕ್ಕು
ಕೊಟ್ಟೂರು - 583134
POST CARD
ಎನ್. ಎಸ್. ಭೋಸರಾಜು.
ಸಚಿವರು.
ಸಣ್ಣ ನೀರಾವರಿ ಇಲಾಖೆ.
ವಿಧಾನ ಸೌಧ.
ಬೆಂಗಳೂರು
PIN 560001

ಪುರಾಣದಲ್ಲಿ ಉಲ್ಲೇಖ ಇದೆ. 1890 ರಲ್ಲಿ ಪುನರ್ ಚೇತನಗೊಂಡಿದ್ದು 854 ಎಕ್ಕರೆ ವಿಸ್ತೀರ್ಣ ಹಾಗೂ 4 ಸಾವಿರ ಎಕ್ಕರೆ ನೀರಾವರಿಗೆ ಪೂರೈಕೆ ಆಗುವಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಸಾವಿರಾರು ಬೋರವೆಲ್‌ಗಳ ಅಂತರ್ಜಲಕ್ಕೆ ಇದು ಕಾರಣವಾಗಿದೆ ಎಂದು ತಿಳಿಸಿದರು.

ಇಂತಹ ಕೆರೆಯು ಸಮರ್ಪಕ ನಿರ್ವಹಣೆ ಇಲ್ಲದೆ ಬಳಲುತ್ತಿದೆ, ಕೆರೆಯ 2 ತೂಬುಗಳು ಶಿಥಿಲವಾಸ್ಥೆಗೊಂಡಿವೆ, ಕೆರೆ ಏರಿ ಬಿರುಕು ಬಿಟ್ಟಿದೆ, ಅಕ್ಕ ಪಕ್ಕ ಗಿಡ ಗಂಟೆಗಳು ಬೆಳೆದು ಕೆರೆಯು ಸಂಬಂದ ಪಟ್ಟ ಇಲಾಖೆಯಿಂದ ನಿರ್ಲಕ್ಷ್ಯಕ್ಕೀಡಾಗಿದೆ ಎಂದರು.

> ಕೊಟ್ಟೂರು ಕೆರೆಗೆ ಶಾಶ್ವತ ನೀರು ತರಬೇಕೆಂದು ರಾಜಕಾರಣಿಗಳು ಹಾಗೂ ಇಲ್ಲಿನ ಮಠಾದೀಶರು ಹೋರಾಟ ಮಾಡುತ್ತಲೇ ಇದ್ದಾರೆ. ಆದ್ರೆ ಸರ್ಕಾರ ಮಾತ್ರ ಇತ್ತ ತಿರುಗಿ ನೋಡುತ್ತಿಲ್ಲ. ಸರ್ಕಾರಕ್ಕೆ ಕೇಳಿಸುವ ನಿಟ್ಟಿನೊಳಗೆ ಇಲ್ಲಿನ ಜನರು ಸಿದ್ದಗೊಳಬೇಕು.
> – ಅಂಚೆ ಕೊಟ್ರೇಶ್
> ನಮ್ಮ ಕೆರೆ ನಮ್ಮ ಹಕ್ಕು ಸಂಘಟನೆ ಸಂಚಾಲಕರು.ಕೊಟ್ಟೂರು.

ಇದನ್ನು ಈಗೆ ನಿರ್ಲಕ್ಷಿಸಿ ಮೈಮರೆತರೆ ನೀರು ಪೋಲಾಗಿ ಉಂಟಾಗುವ ಅನಾಹುತ ದಿಂದ ಪ್ರಾಣಿ, ಪಕ್ಷಿಗಳಿಗೆ ಹಾಗೂ ಜನರಿಗೆ ದೊಡ್ಡ ಮಟ್ಟದ ನಷ್ಟ ಉಂಟಾಗುತ್ತೆ ಈ ಕಾರಣ ಮುಂಜಾಗ್ರತವಾಗಿ ಶೀಘ್ರ ಇದರ ಸಂರಕ್ಷಣೆಗೆ ಸಚಿವರು ಮುಂದಾಗಬೇಕೆಂದರು.

# ನಗುವುದ ಕಲಿಯೋಣ ನಗುತಾ ಬಾಳೋಣ

## ಗೆದ್ದಲಗಟ್ಟೆ ಶಾಲಾ ಮಕ್ಕಳಿಂದ ಟಿಎಚ್‌ಎಂ ಶೇಖರಯ್ಯ ರಚನೆ ಕೃತಿ ಲೋಕಾರ್ಪಣೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಶಿಕ್ಷಕ ಶೇಖರಯ್ಯ ಟಿ. ಎಚ್. ಎಂ ಇವರ ರಚನೆಯ, ವಿಶ್ವಾಸ ಪ್ರಕಾಶನ ಗೆದ್ದಲಗಟ್ಟೆ ಇವರು ಪ್ರಕಟಿಸಿರುವ ನಗುವುದ ಕಲಿಯೋಣ.... ನಗುತಾ ಬಾಳೋಣ ಕೃತಿಯನ್ನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗೆದ್ದಲಗಟ್ಟೆಯಲ್ಲಿ ಬುಧವಾರ ಶಾಲಾ ಮಕ್ಕಳಿಂದ ಲೋಕಾರ್ಪಣೆಗೊಳಿಸ ಲಾಯಿತು.

ಶಾಲಾ ಮುಖ್ಯ ಗುರು ರಾಜಪ್ಪ ಮಾತನಾಡಿ, ಇಂದು ಪುಸ್ತಕಗಳನ್ನು ಓದುವರ ಸಂಖ್ಯೆ ಕ್ಷೀಣಿಸುತ್ತಿರುವುದು ಬೇಸರದ ಸಂಗತಿಯಾಗಿದ್ದು, ಮತ್ತೆ ಪುಸ್ತಕ ಓದುವ ಸಂಸ್ಕೃತಿ ಮರುಕಳಿಸುವಂತಾಗಲಿ. ಪುಸ್ತಕವನ್ನು ಕೊಂಡು ಓದಿದಾಗ ಬರಹ ಗಾರರಿಗೂ ನ್ಯಾಯ ಒದಗಿಸಿದಂತಾಗುತ್ತದೆ ಎಂದು ತಿಳಿಸಿದರು.

ಕೃತಿಯ ಲೇಖಕ ಶೇಖರಯ್ಯ ಟಿ. ಎಚ್. ಎಂ ಮಾತನಾಡಿ, ಕೃತಿಯನ್ನು ನಮ್ಮ ಶಾಲಾ ಮಕ್ಕಳಿಂದ ಬಿಡುಗಡೆಗೊಳಿಸುತ್ತಿರುವುದು ಅತ್ಯಂತ ಖುಷಿ ಕೊಟ್ಟಿದೆ. ಸದರಿ ಕೃತಿಯಲ್ಲಿನ ಲೇಖನಗಳು ನಾಡಿನ ಹೆಸರಾಂತ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಪ್ರಕಟವಾದಂತವುಗಳಾಗಿದ್ದು, ಓದುಗರ ಅಪೇಕ್ಷೆಯ ಮೇರೆಗೆ ಸಂಕಲನದ ರೂಪದಲ್ಲಿ ತರಲಾಗಿದೆ. ಸದರಿ ಕೃತಿಯಲ್ಲಿ ಮಕ್ಕಳನ್ನು ಬಾಧಿಸುತ್ತಿರುವ ಮೊಬೈಲ್ ಗೀಳಿನಿಂದ ಅವರನ್ನು ಹೊರತರುವ ಸರಳೋಪಾಯಗಳ ಕುರಿತಾದ, ಪರೀಕ್ಷೆ ಯನ್ನು ಮಕ್ಕಳು ಧೈರ್ಯವಾಗಿ ಎದುರಿಸಲು ಅನುಸರಿಸಬೇಕಾದ ವಿಧಾನ ಗಳ ಕುರಿತಾದ, ಆಧುನಿಕ ಜಂಜಡದ ಜೀವನದಲ್ಲಿ ನಗುವಿನ ಮಹತ್ವದ ಕುರಿತಾದ ಲೇಖನಗಳ ಜೊತೆಗೆ ಕೂಡ್ಲಿಗಿ ತಾಲೂಕಿನ ವಿಶೇಷತೆಗಳಾದ ಹುಣಸೆ ಸುಗ್ಗಿ ಸಂಭ್ರಮ, ಚಿತಾಭಸ್ಮ ಸ್ಮಾರಕ, ಗುಡೇಕೋಟೆ ಹೋಬಳಿಯ ವಿಶೇಷತೆಗಳು ಸೇರಿ ಮಹತ್ವದ ಲೇಖನಗಳಿವೆ ಎಂದರು.

ಸರಳವಾಗಿ ನಡೆದ ಸಮಾರಂಭದಲ್ಲಿ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಬಸವನಗೌಡ, ಶಿಕ್ಷಕರಾದ ಹನುಮಂತರಾಜ ಸಿ ಆರ್, ಮಂಜುನಾಥ ಜಿ, ನೇಸರ ಜಿ. ವಿ., ನೇತ್ರಾವತಿ ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.




## ಬೆಳಕಿನ ಹಾದಿ

# ಪೋಷಕರ ಜವಾಬ್ದಾರಿ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಒಂದೂರಲ್ಲಿ ಶೇಖರ ಹಾಗೂ ಸುಮಂಗಲಾ ಎಂಬ ದಂಪತಿಗಳಿದ್ದರು. ಅವರದು ತುಂಬಾ ಶ್ರೀಮಂತ ಮನೆತನ. ಮನೆಯ ತುಂಬಾ ಆಳು ಕಾಳುಗಳು. ಅವರಿಗೆ ಒಬ್ಬಳೇ ಮಗಳು. ತುಂಬಾ ಮುದ್ದಿನಿಂದ ಸಾಕಿದ್ದರು. ಮುದ್ದು ಹೆಚ್ಚಾಗಿ ಮೊಂಡುತನ, ಹಠಮಾರಿತನ ಬೆಳೆದಿದ್ದವು. ಅವಳು ದಿನಾಲೂ ಶಾಲೆಗೆ ಹೋಗುತ್ತಿದ್ದಳು. ಆದರೆ ಶಾಲೆಯಲ್ಲಿ ಹೇಳಿಕೊಳ್ಳುವಂತಹ ಸಾಧನೆ ಏನೂ ಮಾಡಿರಲಿಲ್ಲ. ಸುಮ್ಮನೆ ಪಾಸ್ ಆಗುತ್ತಿದ್ದಳು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಂದೆ ಶಿಕ್ಷಕರನ್ನು ಮನೆಗೆ ಕರೆಸಿ ಮನೆಪಾಠ ಹೇಳಿಸುತ್ತಿದ್ದರು. ಆದರೆ ಅವಳ ಅಭ್ಯಾಸ ಮಾತ್ರ ಅಷ್ಟಕಷ್ಟೇ ಇತ್ತು. ಹಾಗೂ ಹೀಗೂ ಮಾಡಿ 10ನೇ ತರಗತಿ ಪಾಸು ಮಾಡಿ ಕಾಲೇಜು ಮೆಟ್ಟಿಲು ಹತ್ತಿದಳು.

ಮಗಳು ಕಾಲೇಜಿಗೆ ಹೋಗುತ್ತಾಳೆ ಎಂದು ಅಪ್ಪ ಅವಳಿಗೆ ಹೊಸ ಕಾರು ಕೊಡಿಸಿದರು, ಚೆನ್ನಾಗಿರುವ ಬಟ್ಟೆ ಕೊಡಿಸಿದರು. ಆದರೆ ಮಗಳು ಕಾಲೇಜಿಗೆ ಓದೋಕೆ ಹೋಗಿದ್ದೀನಿ ಅನ್ನೋದನ್ನು ಮರೆತು ಷೋಕಿಗೆ ಕಾಲೇಜಿಗೆ ಹೋಗುತ್ತಿದ್ದ ಹಾಗಿದ್ದಳು. ಅವಳ ಹತ್ತಿರ ದುಡ್ಡಿರೋದ್ರಿಂದ ಒಂದಿಷ್ಟು ಗೆಳತಿಯರನ್ನು ಸಂಪಾದಿಸಿಕೊಂಡಿದ್ದಳು. ಅವರು ಇವಳು ಹೇಳಿದ ಕೆಲಸ ಮಾಡುವುದು, ಅವಳ ಹಿಂದೆ ಜೈಕಾರ ಹಾಕಿಕೊಂಡು ತಿರುಗುತ್ತಿದ್ದರು. ಅವಳು ಕೊಡಿಸೋ ತಿಂಡಿ ತಿನಿಸು ತಿಂದು, ಅವಳ ಜೊತೆ ಮಜಾ ಮಾಡಿಕೊಂಡಿದ್ದರು. ಕಾಲೇಜಿಗೆ ಬಂದರೂ ತರಗತಿಗೆ ಹಾಜರಾಗುತ್ತಿರಲಿಲ್ಲ. ಉಪನ್ಯಾಸಕರು ಕರೆದು ಬುದ್ದಿ ಹೇಳಿದರು. ಪ್ರತಿದಿನ ತರಗತಿಗ ಹಾಜರಾಗದಿದ್ದರೆ ಪರೀಕ್ಷೆಗೆ ಕೂರಿಸಲ್ಲ ಎಂದು ಎಚ್ಚರಿಕೆ ಕೊಟ್ಟರು. ಮನೆಯಲ್ಲಿ ಕಾಲೇಜಿಗೆ ಹೋಗ್ತೀನಿ ಅಂತ ಹೇಳಿ ತಯಾರಾಗಿ ಹೋಗೋದು ಮತ್ತು ಇಡೀ ದಿನ ಮೋಜು ಮಸ್ತಿ ಮಾಡುತ್ತಾ ತಿರುಗುತ್ತಿದ್ದಳು.

ಒಂದು ದಿನ ಕೂಡಲೇ ಕಾಲೇಜಿಗೆ ಬಂದು ಭೇಟಿಯಾಗಲು ಪೋಷಕರಿಗೆ ಪ್ರಾಂಶುಪಾಲರಿಂದ ಕರೆ ಬಂದಿತು. ಮಗಳು ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಒಳ್ಳೇ ಮಾರ್ಕ್ಸ್ ತೆಗೆದಿರಬೇಕು, ಅದಕ್ಕೆ ಕರೆದಿದ್ದಾರೆ ಎಂದುಕೊಂಡು ಗಂಡ ಹೆಂಡತಿ ಇಬ್ಬರು ಸಡಗರ ಪಟ್ಟರು. ಯಾವಾಗ ಬೆಳಗು ಆಗುತ್ತೋ ಎಂದು, ಯಾವಾಗ ಕಾಲೇಜಿಗೆ ಹೋಗ್ತೀವೋ ಎಂದು ಕಾಯುತ್ತಿದ್ದರು.

ಮರುದಿನ ದಂಪತಿಗಳು ಮಗಳಿಗೆ ಸರ್‌ಪ್ರೈಸ್ ಕೊಡಬೇಕೆಂದು ಅವಳಿಗೆ ಹೇಳದೇ ಕಾಲೇಜಿಗೆ ಹೋದರು. ಪ್ರಾಂಶುಪಾಲರು ಅವರನ್ನು ಕುಳ್ಳಿರಿಸಿ ನಿಮ್ಮ ಮಗಳನ್ನು ಕರೆಯಿಸಲಾ ಎಂದು ಕೇಳಿದರು. ಅಯ್ಯೋ! ಅದಕ್ಕೇನಂತೆ ಕರೆಸಿ ಸರ್. ನಾವು ಬರುವ ವಿಷಯ ಅವಳಿಗೆ ತಿಳಿಸಿಲ್ಲ, ಯಾಕೆಂದರೆ ನಮ್ಮನ್ನು ನೋಡಿ ಆಶ್ಚರ್ಯವಾಗಬೇಕು ಎಂದರು. ಅವಳನ್ನು ಕರೆತರಲು ಪೀವನ್‌ಗೆ ಆದೇಶ ಕೊಟ್ಟರು. ಅವಳ ಕ್ಲಾಸ್ ಲೆಕ್ಚರರ್ ಬಂದು ಸರ್ ಅವಳು ಕಾಲೇಜಿಗೆ ಬಂದಿಲ್ಲ ಎಂದರು. ಕಾಲೇಜಿಗೆ ಹೋಗ್ತೀನಿ ಅಂತ ಹೇಳಿ ನಮ್ಮ ಮುಂದೆ ಹೋದ ಮೇಲೆ ನಾವು ಇಲ್ಲಿಗೆ ಬಂದದ್ದು ಎಂದರು ತಾಯಿ. ಆಗ ಅವಳ ಕ್ಲಾಸಿನಲ್ಲಿ ಇರುವ ಅವಳ ಗೆಳತಿಯರನ್ನು ಕರೆಸಿದರು. ಅವಳು ಬಂದಿಲ್ಲ ಎಂದರು.

ಆಗ ಪ್ರಾಂಶುಪಾಲರು 'ನಿಮ್ಮ ಮಗಳು 3 ತಿಂಗಳಿಂದ ಕಾಲೇಜಿಗೆ ಬಂದಿಲ್ಲ. ಎಚ್ಚರಿಕೆ ಕೊಟ್ಟ ಹೇಳಿದರೂ ನಿಮ್ಮ ಮಗಳು ಕ್ಯಾರೆ ಅನ್ನಲಿಲ್ಲ, ನಮ್ಮ ಮಾತು ಕೇಳಲಿಲ್ಲ. ತಂದೆ ತಾಯಿಯವರು ಮಕ್ಕಳನ್ನು ಕಾಲೇಜಿಗೆ ಕಳಿಸಿದರೆ ಸಾಲಲ್ಲ. ಅವಳು ಎಲ್ಲಿ ಹೋಗುತ್ತಿದ್ದಾಳೆ? ಏನು ಮಾಡುತ್ತಿದ್ದಾಳೆ? ಯಾರ ಜೊತೆ ತಿರುಗಾಡುತ್ತಿದ್ದಾಳೆ? ಅನ್ನೋದರ ಬಗ್ಗೆನೂ ಕಾಳಜಿ ಮಾಡಬೇಕು. ಮನೆಗೆ ಬಂದ ಮೇಲೆ ಓದುತ್ತಿದ್ದಾಳಾ ಅಥವಾ ಬರೀ ಮೊಬೈಲ್ ಫೋನ್ ಹಿಡಿದುಕೊಂಡು ಕೂತಿದ್ದಾಳಾ ಅಂತ ಒಂದು ಕಣ್ಣಿಡಬೇಕು. ಒಬ್ಬಳೇ ಮಗಳು ಅಂತ ಐಷಾರಾಮಿ ಜೀವನ ಕೊಟ್ಟು ಅವಳನ್ನು ಹಾಳು ಮಾಡುವುದಲ್ಲ. ಸಂಸ್ಕಾರ ಕೊಟ್ಟು ಬೆಳೆಸಬೇಕು. ನಾಳೆ ಇನ್ನೊಬ್ಬರ ಮನೆಗೆ ಹೋಗುವವಳು ಎನ್ನುವದನ್ನು ಗಮನದಲ್ಲಿಟ್ಟುಕೊಂಡು ಬೆಳಸಬೇಕು, ಮಕ್ಕಳನ್ನು ಹೆತ್ತರೆ ಸಾಲದು, ಹೇಗೆ ಇರಬೇಕೆಂಬುದನ್ನು ಕಲಿಸಬೇಕು. ಅತಿಯಾದ ಪ್ರೀತಿ, ಸಲುಗೆ ಎರಡೂ ಒಳ್ಳೆಯದಲ್ಲ. ಒಳ್ಳೆ ಸಂಸ್ಕಾರ ಕೊಟ್ಟು ಅವಳನ್ನು ಆದರ್ಶ ನಾರಿಯನ್ನಾಗಿ ಮಾಡಿದರೆ ಹೆತ್ತ ಮನೆ, ಹೋದ ಮನೆ ಎರಡಕ್ಕೂ ಕೀರ್ತಿ ತರುತ್ತಾಳೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂದು ಬೈದು ಬುದ್ದಿವಾದ ಹೇಳಿದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.**
**ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಜಪಾನಿನಲ್ಲಿ ಶಿಕ್ಷಕರ ಸ್ಥಾನ ಮಾನ

ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ನಾವು ಶಿಕ್ಷಕರ ದಿನಾಚರಣೆಯನ್ನು ಆಚರಿಸುತ್ತೇವೆ.ಮೊದಲು ಕೇವಲ ಒಂದು ಶುಭಾಶಯ ಹೇಳುವುದರೊಂದಿಗೆ ಈ ಶಿಕ್ಷಕರ ದಿನಾಚರಣೆ ಮುಗಿದು ಹೋಗುತ್ತಿತ್ತು,ಆದರೆ ಬದಲಾದ ಕಾಲಘಟ್ಟದಲ್ಲಿ ತೋರಿಕೆಯ ಜೀವನ ಶೈಲಿಯಲ್ಲಿ ಜನರು ತಮ್ಮ ಬದುಕನ್ನು ಪ್ರದರ್ಶನಕ್ಕೆ ಇಡುವ ರೀತಿಯಲ್ಲಿರುವ ವಿವಿಧ ಬಗೆಯ ಆಚರಣೆಗಳು 'ಮಂತ್ರಕ್ಕಿಂತ ಉಗುಳೇ ಹೆಚ್ಚು' ಎಂಬಂತೆ ನಡೆಯುತ್ತಿವೆ. ಆ ದಿನದಂದು ಶಿಕ್ಷಕರನ್ನು ಸನ್ಮಾನಿಸುವ, ಶಿಕ್ಷಕರ ಕುರಿತಾದ ಗೌರವ ಭಾವನೆಯನ್ನು ವ್ಯಕ್ತಪಡಿಸುವ 'ಗುರುವೇ ನಮಃ' ಎಂದು ಹೇಳುವ ಜನರು ಮರುದಿನವೇ ಗುರುವೇನು ಮಹಾ? ಎಂಬಂತೆ ವರ್ತಿಸುತ್ತಾರೆ. ತಮಾಷೆಗಾಗಿಯೂ ಸಾಲಿ ಮಾಸ್ತರಗ ಬುದ್ಧಿ ಇಲ್ಲ ಎಂಬ ವಾಕ್ಯ ಪ್ರಯೋಗ, ಇನ್ನು ಇದ್ನಾ ಕಲಿಸ್ಯಾರೇನು ನಿಮ್ಮ ಮಾಸ್ತರು ಎಂಬ ಹೀಯಾಳಿಕೆಗಳು ಕೂಡ ನಮ್ಮಲ್ಲಿ ಧಾರಾಳವಾಗಿ ಕಾಣುತ್ತೇವೆ.

ಆದರೆ ಜಪಾನ್ ದೇಶದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದೇ ಇಲ್ಲ. ಭಾರತೀಯ ಪ್ರೊಫೆಸರ್ ಒಬ್ಬರು ಜಪಾನ್ ದೇಶದಲ್ಲಿನ ವಿಶ್ವವಿದ್ಯಾಲಯವೊಂದಕ್ಕೆ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಸಮಯ. ಒಂದು ದಿನ ಊಟದ ಬಿಡುವಿನ ಸಮಯದಲ್ಲಿ ತಮ್ಮ ಸಹೋದ್ಯೋಗಿಯನ್ನು ಕುರಿತು ಅವರು ನೀವು ಶಿಕ್ಷಕರ ದಿನಾಚರಣೆಯನ್ನು ಯಾವಾಗ ಆಚರಿಸುತ್ತೀರಿ ? ಎಂದು ಕೇಳಿದರು.

ಇದನ್ನು ಕೇಳಿದ ಆ ಪ್ರೊಫೆಸರ್ ನಸು ನಕ್ಕು ಅತ್ಯಂತ ಶಾಂತವಾಗಿ ನಮ್ಮ ಜಪಾನ್ ದೇಶದಲ್ಲಿ ಶಿಕ್ಷಕರ ದಿನಾಚರಣೆಯಂತಹ ಕಾರ್ಯಕ್ರಮಗಳನ್ನು ಆಚರಿಸುವುದಿಲ್ಲ ಅಂತಹ ಯಾವುದೇ ದಿನವನ್ನು ಆಚರಿಸುವ ಅವಶ್ಯಕತೆಯನ್ನು ನಮ್ಮ ದೇಶದಲ್ಲಿ ನಾವು ಯೋಚಿಸಿಯೇ ಇಲ್ಲ. ಎಂದು ಹೇಳಿದರು.

ಭಾರತದ ಪ್ರೊಫೆಸರರಿಗೆ ಈ ವಿಷಯ ತುಸು ಸೋಜಿಗವನ್ನು ಉಂಟು ಮಾಡಿತು. ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಮತ್ತು ತಂತ್ರಜ್ಞಾನದಲ್ಲಿ ಮಂಚೂಣಿಯಲ್ಲಿರುವ ಒಂದು ದೇಶದಲ್ಲಿ ಶಿಕ್ಷಣವನ್ನು ಕೇವಲ ಒಂದು ಮಾಧ್ಯಮ,ಸಾಂಕೇತಿಕವಾಗಿ ಮಾತ್ರ ಶಿಕ್ಷಣವನ್ನು ಗುರುತಿಸುವುದು ಪ್ರೊಫೆಸರರಿಗೆ ಅಚ್ಚರಿ ಮೂಡಿಸಿತು. ನಂತರದ ದಿನಗಳಲ್ಲಿ ಭಾರತದ ಪ್ರೊಫೆಸರರಿಗೆ ಕೊಂಚ ಕೊಂಚವಾಗಿ ಇದರ ಅರಿವು ಆಗತೊಡಗಿತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಜಪಾನ್ ನಲ್ಲಿ ಶಿಕ್ಷಕರನ್ನು ಗೌರವಿಸುವ ನಿಟ್ಟಿನಲ್ಲಿ ಕೇವಲ ಒಂದು ದಿನ ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದಿಲ್ಲ. ಇಲ್ಲಿ ವರ್ಷದ 365 ದಿನವೂ ಶಿಕ್ಷಕರನ್ನು ಗೌರವಿಸಲಾ ಗುತ್ತದೆ.

ಅದೊಂದು ದಿನ ಮಧ್ಯಾಹ್ನದ ಸಮಯದಲ್ಲಿ ತನ್ನ ತರಗತಿಗಳನ್ನು ಮುಗಿಸಿದ ಭಾರತದ ಪ್ರೊಫೆಸರ್ ತಮ್ಮ ಸಹೋದ್ಯೋಗಿಯೊಂದಿಗೆ ತಮಗೆ ಕೊಡಲ್ಪಟ್ಟ ವಸತಿಗೃಹಕ್ಕೆ ಮರಳುತ್ತಿದ್ದರು. ಮಧ್ಯಾಹ್ನದ ಸಮಯದಲ್ಲಿ ಅತ್ಯಂತ ಜನದಟ್ಟಣೆಯಿಂದ ಕೂಡಿದ ಸಬ್ ವೇ ಯಲ್ಲಿ ಕಾಲೂರಲು ಕೂಡ ಸ್ಥಳ ಸಿಗದೇ ಪ್ರೊಫೆಸರ್ ನಿಂತುಕೊಂಡಿದ್ದರು. ಅಸಾಧ್ಯ ಜನಜಂಗುಳಿಯಿಂದ ಕೂಡಿದ್ದ ರೈಲಿನಲ್ಲಿ ಇವರನ್ನು ಶಿಕ್ಷಕ ಎಂದು ಗುರುತಿಸಿದ ಓರ್ವ ವಯಸ್ಸಾದ ಹಿರಿಯ ವ್ಯಕ್ತಿ ಎದ್ದು ನಿಂತು ಕುಳಿತುಕೊಳ್ಳಲು ತಮ್ಮ ಸೀಟನ್ನು ಬಿಟ್ಟುಕೊಟ್ಟರು.



ಪ್ರೊಫೆಸರ್ ಗೆ ಬಹಳ ಆಶ್ಚರ್ಯವಾಯಿತು. ನಂತರ ಅವರು ತನ್ನೊಂದಿಗೆ ಪ್ರಯಾಣಿಸುತ್ತಿದ್ದ ತಮ್ಮ ಸಹೋದ್ಯೋಗಿ ಯಾಮಾ ಮೋಟೋ ಅವರನ್ನು ಈ ಕುರಿತು ಪ್ರಶ್ನಿಸಿದರು.

ಯಾಮಾ ಮೋಟೋ ಅವರು "ಬಹುಶಹ ಆ ವ್ಯಕ್ತಿ ನಿಮ್ಮ ಶಿಕ್ಷಕರ ಗುರುತಿನ ಚೀಟಿ (ಐಡೆಂಟಿಟಿ ಕಾರ್ಡ್)ಯನ್ನು ನೋಡಿರಬಹುದು. ಆದ್ದರಿಂದಲೇ ನಿಮಗೆ ತಮ್ಮ ಸ್ಥಳವನ್ನು ಬಿಟ್ಟು ಕೊಟ್ಟಿದ್ದಾರೆ ಇಲ್ಲಿ ಶಿಕ್ಷಕರಿಗೆ ಬಹಳ ಮಾನ್ಯತೆ ನೀಡುತ್ತಾರೆ ಎಂದು ಉತ್ತರಿಸಿದರು.

ಶಿಕ್ಷಕರಿಗೆ ಗೌರವ ನೀಡುವುದು ಕೇವಲ ಒಂದು ಸಭ್ಯತೆಯಲ್ಲ ಅದೊಂದು ಸಂಸ್ಕೃತಿ. ಶಿಕ್ಷಕರೊಂದಿಗೆ ಸೌಜನ್ಯದಿಂದ ವರ್ತಿಸುವುದು ಅವರಿಗೆ ನಾವು ನೀಡುವ ಗೌರವ ಎಂಬುದನ್ನು ಜಪಾನೀಯರಿಂದ ಆ ಪ್ರೊಫೆಸರ್ ಅರಿತರು.

ಕೆಲ ದಿನಗಳ ನಂತರ ಆ ಪ್ರೊಫೆಸರರು ತಮ್ಮ ಸಹೋದ್ಯೋಗಿ ಯಾಮಾ ಮೋಟೋರ ಕುಟುಂಬಕ್ಕೆ ಉಡುಗೊರೆಯೊಂದನ್ನು ಖರೀದಿಸಬೇಕಾದ ಸಂದರ್ಭ ಒದಗಿ ಬಂತು. ಯಾಮಾ ಮೋಟೋ ಪ್ರೊಫೆಸರರನ್ನು ಒಂದು ಸಾಧಾರಣ ಪುಸ್ತಕದ ಅಂಗಡಿಗೆ ಕರೆದೊಯ್ದರು. ಅಲ್ಲಿ ಯಾವುದೇ ರೀತಿಯ ವೈಭವೋಪೇತ ಸಾಮಾನುಗಳು ಇರಲಿಲ್ಲ. ಯಾಮಾ ಮೋಟೋ ತನ್ನ ಶಿಕ್ಷಕರ ಗುರುತಿನ ಚೀಟಿಯನ್ನು ತೋರಿಸಿದಾಗ ಆತನಿಗೆ ದರದಲ್ಲಿ ಬಹಳಷ್ಟು ರಿಯಾಯಿತಿಯನ್ನು ನೀಡಲಾಯಿತು. ಯಾವುದೇ ರೀತಿಯ ಜೋರು ಗಲಾಟೆ ಇಲ್ಲದೆ ಹೇಳಿಕೆಗಳಿಲ್ಲದೆ, ಗೌಜಿ ಗದ್ದಲ ಮಾಡದೇ ಅತ್ಯಂತ ಸಹಜವಾಗಿ ಶಿಕ್ಷಕರನ್ನು ಗೌರವಿಸುವ ವಿಧಾನ ಇದು.

ಜಪಾನಿನಲ್ಲಿ ಶಿಕ್ಷಕರಿಗೆ ವಿಐಪಿಗಳಿಗೆ ಮಾತ್ರ ಇರುವ ದಾರಿಗಳನ್ನು ಬಿಟ್ಟುಕೊಡುವುದಿಲ್ಲ ನಿಜ ಅಥವಾ ವರ್ಷಕ್ಕೊಮ್ಮೆ "ಗುರು ಬ್ರಹ್ಮ, ಗುರುರ್ವಿಷ್ಣು ಗುರು ದೇವೋ ಮಹೇಶ್ವರಃ ಎಂದು ಹಾಡಿ ಹೊಗಳಿ ಅಟ್ಟಕ್ಕೇರಿಸಿ ಹಾರ ತುರಾಯಿ ಹಾಕಿ ಸನ್ಮಾನ ಮಾಡಿ ಚಪ್ಪಾಳೆ ಹೊಡೆದು ಸಂಭ್ರಮಿಸುವುದಿಲ್ಲ, ಆದರೆ ಅವರು ಅದಕ್ಕಿಂತಲೂ ಹೆಚ್ಚು ವಿಶೇಷವಾದ ಗೌರವವನ್ನು ಪ್ರತಿದಿನ ಮತ್ತು ಪ್ರತಿಕ್ಷಣ ಈ ಸಮಾಜದಿಂದ ಪಡೆಯುತ್ತಾರೆ. ಶಿಕ್ಷಕರ ನಿಜವಾದ ತೂಕ ಮತ್ತು ವ್ಯಕ್ತಿತ್ವವನ್ನು ಜಪಾನೀಯರು ಅರಿತಿದ್ದಾರೆ.

ಜಪಾನಿನಲ್ಲಿ ಶಿಕ್ಷಕ ವೃತ್ತಿಯನ್ನು ನಿರ್ವಹಣೆ ಅತ್ಯಂತ ಬೇಡಿಕೆಯಲ್ಲಿರುವ ಮತ್ತು ಗೌರವಾರ್ಹ ಉದ್ಯೋಗಗಳಲ್ಲಿ ಒಂದು. ಶಿಕ್ಷಕರಾಗುವ ದಾರಿ ಕಠಿಣವಾಗಿದೆ. ಅತ್ಯುನ್ನತ ಶೈಕ್ಷಣಿಕ ಹಿನ್ನೆಲೆ ಮತ್ತು ಮೌಲ್ಯವರ್ಧಿತ ಶಿಕ್ಷಣವನ್ನು ಹೊಂದಿರುವ ವ್ಯಕ್ತಿ ಮಾತ್ರ ಶಿಕ್ಷಕನಾಗಲು ಸಾಧ್ಯ. ಸ್ವತಃ ಮೌಲ್ಯಗಳ ಗಣಿಯಾಗಿರಬೇಕು ಜಪಾನಿನ ಶಿಕ್ಷಕ. ಜಪಾನಿನಲ್ಲಿ ಎಲ್ಲರೂ ಶಿಕ್ಷಕರಾಗಲು ಸಾಧ್ಯವಿಲ್ಲ. ಜಪಾನಿನಂತಹ ದೇಶದಲ್ಲಿ ಶಿಕ್ಷಕರಾಗಲು ಬಹಳಷ್ಟು ಧೈರ್ಯ ಬೇಕು.

ಆದ್ದರಿಂದಲೇ ಇಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದಿಲ್ಲ... ಪ್ರತಿದಿನವೂ ಗೌರವಿಸಲ್ಪಡುವ ಶಿಕ್ಷಕನಿಗೆ ಕೇವಲ ಒಂದು ದಿನ ಗೌರವಿಸುವುದು ಬಹಳ ಕಡಿಮೆ ಅಲ್ಲವೇ..... ಅದು ಅಲ್ಲದೆ ಹಾಗೆ ಶಿಕ್ಷಕರನ್ನು ಒಂದು ದಿನದ ಮಟ್ಟಿಗೆ ಸೀಮಿತಗೊಳಿಸಿ ಗೌರವಿಸುವುದು ಅನವಶ್ಯಕ ಎಂಬುದು ಅಲ್ಲಿ ಇದ್ದ ಕೆಲ ದಿನಗಳಲ್ಲೇ ಪ್ರೊಫೆಸರರಿಗೆ ಅರ್ಥವಾಯಿತು.

ನೋಡಿದಿರಾ ಸ್ನೇಹಿತರೆ! ನಮ್ಮಲ್ಲಿ ಗುರುವನ್ನು ದೇವರಿಗೆ ಸರಿಸಮನೋ ಎಂದು ಪೂಜಿಸುತ್ತೇವೆ, ಆರಾಧಿಸುತ್ತೇವೆ. ಮಾತೃದೇವೋಭವ, ಪಿತೃದೇವೋಭವ ಎಂಬ ಸಾಲಿನ ನಂತರ ಬರುವುದು ಆಚಾರ್ಯ ದೇವೋಭವ. ಇಲ್ಲಿ ಆಚಾರ್ಯ ಎಂದರೆ ಗುರು. ಅಂತಹ ಅತ್ಯುನ್ನತ ಸ್ಥಾನವನ್ನು ಪಡೆದಿರುವ ಶಿಕ್ಷಕರು ನಮ್ಮಲ್ಲಿ ಅಂದಿನಿಂದಲೂ ಇದ್ದಾರೆ. ರಾಮಾಯಣದಲ್ಲಿ ವಸಿಷ್ಠ,ವಿಶ್ವಾಮಿತ್ರ ಮಹರ್ಷಿಗಳು, ಮಹಾಭಾರತದಲ್ಲಿ ಕೃಪಾಚಾರ್ಯ ಮತ್ತು ದ್ರೋಣಾಚಾರ್ಯರು, ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಗುರುವಾಗಿ ನಿಂತು ದಾರಿ ತೋರಿದ್ದಾರೆ, ತಪ್ಪನ್ನು ತಿದ್ದಿದ್ದಾರೆ. ಹುರಿದುಂಬಿಸಿ ಬದುಕಿನ ಹಾದಿಯಲ್ಲಿ ಮುನ್ನಡೆಸಿದ್ದಾರೆ.

'ಅಕ್ಷರ ಮಿದಂ ಕಲಿಸಿದಾತಂ ಗುರು 'ಎಂಬ ನಮ್ಮ ಹಿರಿಯರ ಮಾತಿನಂತೆ ಒಂದಕ್ಷರ ಹೇಳಿಕೊಟ್ಟಾತ ಗುರು ಎನ್ನುವುದಾದರೆ ನಮ್ಮ ಬದುಕಿನಲ್ಲಿ ನಮಗೆ ಜೀವನದ ಪಾಠವನ್ನು ಕಲಿಸಿಕೊಟ್ಟ ತಂದೆ ತಾಯಿ ಗುರು ಹಿರಿಯರು ಸಹ ಹೀಗೆ ಎಲ್ಲರೂ ಗುರುಗಳೇ ಅಲ್ಲವೇ?

ಗುರುಗಳನ್ನು ದೇವರೆಂದು ಪೂಜಿಸದಿದ್ದರೆ ಪರವಾಗಿಲ್ಲ, ಆದರೆ ಅವರನ್ನು ಅಲ್ಲಗಳೆಯಬೇಡಿ. ಹೀನಾಯವಾಗಿ ಕಾಣಬೇಡಿ. ಪಾಲಕರು ತಮ್ಮ ಮಕ್ಕಳ ಮುಂದೆ ಅವರ ಗುರುಗಳನ್ನು ಕ್ಷುಲ್ಲಕವಾಗಿ ನೋಡಿದಾಗ, ಕೈ ತೋರಿ ತಮಾಷೆ ಮಾಡಿ ನಕ್ಕಾಗ ಶಿಕ್ಷಕನಿಗೆ ಆಗುವ ಅವಮಾನ ಅಷ್ಟಿಷ್ಟಲ್ಲ. ಆದರೆ ಅಸಹಾಯಕತೆ ಅವರನ್ನು ಕಟ್ಟಿ ಹಾಕುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಇರುವ ಸ್ಥಾನವನ್ನು ಪುನರ್ ಪ್ರತಿಷ್ಠಾಪಿಸಿ ಗುರುಗಳನ್ನು ಗೌರವಿಸೋಣ ಪ್ರೀತಿಸೋಣ, ಅವರಿಂದ ಆಟ ಪಾಠಗಳ ಜೊತೆಗೆ ಜೀವನದ ಪಾಠವನ್ನು ಕೂಡ ಕಲಿಯೋಣ. ಸಾಂಕೇತಿಕವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಬದಲು ಪ್ರತಿದಿನವೂ ಗುರುಗಳನ್ನು ಗೌರವಿಸುವ ಮೂಲಕ ಆಚರಿಸೋಣ. ಏನಂತೀರಾ ಸ್ನೇಹಿತರೆ?

# ದ್ವಂದ್ವ ಮನಸ್ಥಿತಿ

ನಾವು ಹಲವಾರು ಬಾರಿ ಚಿಕ್ಕ ಮಕ್ಕಳು ಅವರ ಮುಂದೆ ಆಯ್ಕೆಗಳಿಟ್ಟಾಗ ಕೈ ಬೆರಳನ್ನು ಮುಂದೆ ಮಾಡಿ " ಅಂಚಿಮಿಂಚಿ..."ಹೇಳುವುದನ್ನುನೋಡಿರಬಹುದು. ಆಯ್ಕೆಯ ದ್ವಂದ್ವವಿದ್ದಾಗ ಮಕ್ಕಳು ತಮ್ಮ ಅಮಾಯಕತೆ ಹಾಗೂ ಮುಗ್ಧತೆಯಿಂದ ಆಯ್ಕೆಯ ದ್ವಂದ್ವದಿಂದ ಪಾರಾಗುವ ಬಗೆ ಈ ಪರಿಯಾದರೆ ಈ ದ್ವಂದ್ವ, ಸಂದಿಗ್ಧ ದೇವಾನುದೇವತೆಗಳಿಗಾಗಲಿ, ಋಷಿಮುನಿಗಳಾಗಲಿ, ವಿಜ್ಞಾನಿಗಳಿಗಾಗಲಿ ಅಥವಾ ಸಾಮಾನ್ಯ ಮನುಷ್ಯರಿಗಾಗಲಿ ಯಾರನ್ನೂ ಬಿಟ್ಟಿಲ್ಲ. ಈ ಲೋಕದಲ್ಲಿ ಜನಿಸಿದ ಮೇಲೆ ದ್ವಂದ್ವ ಎನ್ನುವುದು ಉಸಿರಾಟದಷ್ಟೇ ಸಹಜ ಎಂಬುವುದು ವೇದ ಉಪನಿಷತ್ತುಗಳೇ ವಿವರಿಸಿವೆ.

ಜೀವ ಜಗತ್ತಿನಲ್ಲಿ ಶ್ರೇಷ್ಠನೆನಿಸಿದ ಮಾನವ ತನ್ನ ದೇಹದ ಸಾಮರ್ಥ್ಯದಲ್ಲಿ ಪ್ರಾಣಿಗಳಿಗಿಂತ ಬಹಳಿಲ್ಲವಾದರೂ ಜೀವ ವಿಕಾಸದ ಹಾದಿಯಲ್ಲಿ ಮನೋ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಯೋಚಿಸುವ, ಅನ್ವಯಿಸುವ ಹಾಗೆಯೇ ನಿರ್ಧರಿಸುವ ಸಾಮರ್ಥ್ಯ ವನ್ನು ಗಳಿಸಿಕೊಂಡ. ಮನುಷ್ಯನ ಮೆದುಳು ವಿಕಸನದ ಹಾದಿಯಲ್ಲಿ ಊರ್ಜಿತವಾಗಿ ಗಾತ್ರದಲ್ಲಿ ಚಿಕ್ಕದಾದರೂ ಸಂಕೀರ್ಣತೆಯಲ್ಲಿ ಸಾಮರ್ಥ್ಯದಲ್ಲಿ ಜೀವ ಜಗತ್ತಿನಲ್ಲಿಯೇ ಶ್ರೇಷ್ಠವಾಯಿತು. ಕಪಿಗಳ ವಂಶಜನೇ ಆಗಿದ್ದ ಮಾನವ ಎರಡು ಕಾಲಿನಲ್ಲಿ ನಡೆದು, ಹಲವು ಆವಿಷ್ಕಾರ ನಡೆಸಿ ಈಗ ಸರ್ವಶ್ರೇಷ್ಠನೆನಿಸಿದ್ದಾನೆ. ಮಾನವನ ಅಗತ್ಯಗಳು ಮುಂಚೆ ಪ್ರಾಣಿಗಳಿಗಿದ್ದಂತೆ, ಆಹಾರ, ನಿದ್ದೆ ಮೈಥುನಕ್ಕೆ ಸೀಮಿತವಾಗದೆ ಆತನ ಜ್ಞಾನದಾಹ ಆತನನ್ನು ನಿರಂತರ ಚಿಂತನೆಗೆ ಹಚ್ಚುತ್ತದೆ. ಇಡೀ ಜಗತ್ತನ್ನೇ ತನ್ನ ಅಂಕೆಗೆ ಒಳಪಡಿಸುವ ಆತನ ನಿರಂತರ ಪ್ರಯತ್ನ ಆತನಲ್ಲಿ ಯೋಚನಾ ಲಹರಿಯನ್ನೇ ಹರಿಸುತ್ತದೆ. ತನ್ಮೂಲಕ ಮೂಲತಃ ಸಂಕೀರ್ಣವಾದ, ಜಟಿಲ ವಾದ ಮನಸ್ಸನ್ನು ಕ್ಷೋಭೆ ಗೊಳಿಸುತ್ತದೆ. ಕ್ಷೋಭೆಗೊಂಡ ಮನಸ್ಸು ದ್ವಂದ್ವಗಳ ಸ ರ ವ ಾ ಲ ೆ ಂ ು ನ್ ೇ ಸೃಷ್ಟಿಸುತ್ತದೆ.



ಚೇತನ ಭಾರ್ಗವ
ಅರಮನೆತೋಟ

Scan For Digital Colourful
HAMPI TIMES E-paper

ಮನಸ್ಸು ಎಂಬುದು ಇಂದಿಗೂ ಒಂದು ಪೂರ್ಣವಾಗಿ ಬಗೆಹರಿಸಲಾಗದ ಒಂದು ಒಗಟು. ಮನಶ್ಶಾಸ್ತ್ರಜ್ಞರು ಅದರ ಸ್ವರೂಪ ಗುಣಲಕ್ಷಣದ ಬಗ್ಗೆ ಹೇಳುವರೇ ಹೊರತು ಅದರ ಪೂರ್ಣ ನಕ್ಷೆ ತಯಾರಿಸಿ ಇದಮಿತ್ಥಂ ಎಂಬಂತೆ ಇಂದಿಗೂ ಹೇಳಲಾಗಿಲ್ಲ. ಶಿಲಾಯುಗದ ಮಾನವನಿಗೆ ಆತನ ಅಸ್ತಿತ್ವ, ಆಹಾರ ಸಂಪಾದನೆ ಈವಿಷ್ಟೆ ಆತನ ಬದುಕಾಗಿತ್ತು. ಆಧುನೀಕ ಮಾನವ ಜಗತ್ತಿನ ಸೃಷ್ಟಿಯ ಜೊತೆ ತನ್ನದೇ ಕೃತಕ ಸೃಷ್ಟಿಗೈದ. ಪ್ರತಿಯೊಂದಕ್ಕೂ ಈಗ ಆತನಿಗೆ ಹಲವಾರು ಆಯ್ಕೆಗಳ ಸಾಲು ಆತನ ಮುಂದಿದೆ. ಇದನ್ನೇ ನಮ್ಮ ಅಧ್ಯಾತ್ಮ ಮನುಷ್ಯ ಪಂಚಕೋಶಗಳ ಜೀವಿ ಎಂದೂ ಅನ್ನಮಯ ಕೋಶ ಸ್ಥೂಲವಾದರೆ ಮನೋಮಯ ಕೋಶವು ಸೂಕ್ಷವಾದುದು, ಅದರ ಸ್ವರೂಪ ಹಾಗೂ ಸಂಕೀರ್ಣತೆಯನ್ನು ವಿವರಿಸುತ್ತಾ ಯೋಗ ಹಾಗೂ ಪ್ರಾಣಾಯಾಮದಿಂದ ಈ ಕೋಶದ ಮೇಲೆ ನಿಯಂತ್ರಣ ಸಾಧ್ಯ ಎಂದೂ ವಿವರಿಸಿದೆ.

ಆದರೆ ಆಧುನೀಕತೆ ಬೆಳೆದಂತೆ ಮಾನವನ ಪ್ರಗತಿಪರ ನಿಲುವೇ ಆತನಿಗೆ ಮುಳುವಾದಂತಿದೆ. ಮುಂಚೆಯೇ ಹೇಳಿದಂತೆ ಈ ಲೋಕದಲ್ಲಿ ಪ್ರಕೃತಿ ಸಹಜವಾಗಿಯೇ ದ್ವಂದ್ವಗಳನ್ನು ಹೊಸೆದಿಟ್ಟಿದೆ. ಬೆಳಕು ಕಣವೆ ಅಥವಾ ಅಲೆಯೇ ಎಂಬ ದ್ವಂದ್ವಕ್ಕೆ ಇಂದಿಗೂ ವಿಜ್ಞಾನ ವರ್ಗ ಉತ್ತರಿಸಲಾಗದೆ ಈ ದ್ವಂದ್ವವನ್ನು ಸಹಜ ಎಂದೇ ಒಪ್ಪಿಕೊಂಡು ಬಿಟ್ಟಿದೆ. ಹಾಗೆಯೇ ಪ್ರತಿ ವಿಚಾರದಲ್ಲೂ ವೈವಿಧ್ಯ ಸೂಸುವ ಪ್ರಕೃತಿ ಮಾನವನ ವಿಚಾರ ಹಾಗೂ ಮನಸ್ಸಿಗೆ ಸವಾಲು ಒಡ್ಡುತ್ತಾ ಬರುತ್ತದೆ.

ಜೀವನದ ದಾರಿಯಲ್ಲಿಯೂ ನಮಗೆ ತಿರುವುಗಳು ಸಹಜ. ಈ ದಾರಿಯ ನಕ್ಷೆಯಿಲ್ಲದ ಹುಲು ಮಾನವರಾದ ನಾವು ತಿರುವುಗಳಲ್ಲಿ, ಕವಲುಗಳಲ್ಲಿ ದ್ವಂದ್ವಕ್ಕೆ ಈಡಾಗುವುದು ಸಹಜ. ಅದರ ಆಯ್ಕೆಯ ಭಾರ ನಮ್ಮನ್ನು ಹಿಂಡುತ್ತದೆ. ಊಟದ ಆಯ್ಕೆಯಲ್ಲಿ ದ್ವಂದ್ವ, ಐಚ್ಛಿಕ ವಿಷಯಗಳ ಆಯ್ಕೆ , ವೃತ್ತಿಪರ ಕೋರ್ಸುಗಳ ಆಯ್ಕೆ, ಸಂದರ್ಶನದಲ್ಲಿ ಕೇಳುವ ಹಲವು ಆಯ್ಕೆಗಳ ಪ್ರಶ್ನೆಗಳು. ಸಂಗಾತಿಯ ಆಯ್ಕೆಯಲ್ಲಿ, ಹಣದ ಹೂಡಿಕೆಯ ಆಯ್ಕೆ, ವೃತ್ತಿಯ ಆಯ್ಕೆಯಲ್ಲಿ ಕೊನೆಗೆ ಮರಣದ ಸಮಯದಲ್ಲೂ ನಮಗೆ ಈ ದ್ವಂದ್ವಗಳು ಬಿಡುವುದಿಲ್ಲ. ಅದಕ್ಕೆ ಇದು ಸಹಜವೆಂಬಂತೆ ಅಧ್ಯಾತ್ಮ ವಿವರಿಸುತ್ತದೆ. ದ್ವಂದ್ವ ಮನಸ್ಥಿತಿಯು ನಮ್ಮ ಕಾರ್ಯ ಕ್ಷಮತೆಯನ್ನು ಕುಗ್ಗಿಸುತ್ತದೆ. ನಮ್ಮ ನಿರ್ಧಾರ ತೆಗೆದುಕೊಳ್ಳುವ ಸಮಯ ಹಾಗೂ ಸಾಮರ್ಥ್ಯಕ್ಕೆ ಸವಾಲೊಡ್ಡುತ್ತದೆ. ನಮ್ಮನ್ನು ಅಗೋಚರ ಶಕ್ತಿಯ ನಿರ್ಬಂಧಿತರಂತಾಗಿಸುತ್ತದೆ ಹಾಗೂ ನಮ್ಮನ್ನು ಸೀಮಿತಗೊಳಿಸುತ್ತದೆ. ಮನಸ್ಸು ಸಾಗರ ಇದ್ದಂತೆ. ಸಾಗರದ ಅಲೆಗಳಂತೆ ದ್ವಂದ್ವಗಳೂ ಸಹಜವಾಗಿದೆ.

ದ್ವಂದ್ವ ಎದುರಾದಾಗ ನಾವು ತೆಗೆದುಕೊಳ್ಳುವ ಆಯ್ಕೆ ಹಾಗೂ ಅದರ ಪರಿಣಾಮಕ್ಕೆ ನಾವೇ ಹೊಣೆ. ತಪ್ಪು ಆಯ್ಕೆ ತಪ್ಪು ನಿರ್ಧಾರ ಮಾನವ ಕುಲವನ್ನೇ ಅಳಿಸಿಬಿಡುವಂತಹ ಪ್ರಮಾದಗಳು ನಡೆದು ಬಿಡುತ್ತದೆ. ಹಲವಾರು ಆಯ್ಕೆಗಳಿದ್ದರೂ 2ನೇ ಮಹಾಯುದ್ಧದಲ್ಲಿ ಜಪಾನ್ ಶರಣಾಗಲಿ ಎಂದು ಹಾಕಿದ ಅಣು ಬಾಂಬ್ ಮಾಡಿದ ಅನಾಹುತ ಹಾಗೂ ಅದರ ಭೀಕರ ಪರಿಣಾಮಗಳು ನಾವು ಈಗಲೂ ನೋಡಬಹುದಾಗಿದೆ. ಆ ಸಮಯದಲ್ಲಿ ದ್ವಂದ್ವದಲ್ಲಿದ್ದ ಅಮೆರಿಕನ್ ಲೀಡರ್ ಗಳಿಗೆ ಇದನ್ನು ಮೀರಿ ಯೋಚಿಸುವ ಆಯ್ಕೆ ಇತ್ತಾದರೂ ಜಗತ್ತು ಈ ಅನಾಹುತವನ್ನು ನೋಡುವಂತಾಗಿದ್ದು ವಿಪರ್ಯಾಸವೆ ಸರಿ.

ಅದಕ್ಕೆ ಸನಾತನ ಧರ್ಮ ಹಿಂದೆಯೇ ಈ ದ್ವಂದದ ಸಹಜತೆಯನ್ನು ಮನಗಂಡು, ಮನಸ್ಸನ್ನು ಕೇಂದ್ರೀಕರಿಸುವ, ಚಿತ್ತದ ಕ್ಷೋಭೆಯನ್ನು ಹಿಡಿತದಲ್ಲಿಡುವ ಹಾಗೆಯೇ ಮನಸ್ಸಿನ ದ್ವಂದ್ವವನ್ನು ನಿಯಂತ್ರಿಸುವ ಸಾಧನವಾಗಿ ಯೋಗ ಪ್ರಾಣಾಯಾಮ ಮುಂತಾದವನ್ನು, ಜಪ,



ಧ್ಯಾನ ಹೀಗೆ ಹತ್ತಾರು ಸಲಕರಣೆಗಳನ್ನು ಮಾನವ ಕುಲಕೋಟಿಗೆ ಕೊಟ್ಟಿದೆ. ನಮ್ಮ ಆಸೆ, ವ್ಯಾಮೋಹಗಳನ್ನು ಮೀರಿ, ನಮ್ಮಲ್ಲಿ ಸುಪ್ತವಾಗಿರುವ ವಾಸನೆಗಳನ್ನು ಮೀರಿದರೆ ನಮ್ಮನ್ನು ಕಾಡುವ ದ್ವಂದ್ವದಿಂದ ನಾವು ಮುಕ್ತಿ ಪಡೆಯಬಹುದು. ಕ್ಷೋಭೆಯಿಂದ ಮುಕ್ತಗೊಂಡ ತಿಳಿಯಾದ ನಿರ್ಮಲವಾದ ಮನಸ್ಸು ಪವಾಡಗಳನ್ನೇ ಸಾಧಿಸಬಲ್ಲದು. ಹಾಗೂ ನಿರ್ಮಲ ಧೃಡ ಮನಸ್ಸಿನ ದ್ವಂದ್ವ ರಹಿತ ನಿರ್ಧಾರ ವ್ಯಕ್ತಿಯ ಹಾಗೂ ಸಮಾಜದ ಹಿತಕ್ಕೆ ಕಾರಣವಾಗುತ್ತದೆ. ದ್ವಂದ್ವವನ್ನು ಮೀರಿ, ದ್ವೈತವನ್ನು ದಾಟಿ ಅದ್ವೈತವನ್ನು ಅಂದರೆ ಸರ್ವವ್ಯಾಪಿಯಾದ ಶಕ್ತಿಯಲ್ಲಿ ಲೀನವಾಗುವುದೇ ಜೀವನದ ಗುರಿ ಎಂದೆನಿಕೊಳ್ಳುತ್ತದೆ. ಇದು ನಿರಂತರ ಸಾಧನೆ ಹಾಗೂ ಗುರು ಕೃಪೆಯಿಂದ ಸಾಧ್ಯವಿದೆ ಎಂಬಲ್ಲೆ ದ್ವಂದ್ವವನ್ನು ಮಣಿಸುವ ರಹಸ್ಯವೂ ಅಡಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

**ಕವಿ ಮನಸು**

## ಗಂಡ್ಸು ಅಂದ್ರೆ..



ಏಕೋ ಸುಸ್ತು ಮೈಕೈ ನೋವು
ಒಸೀ ಕುದ್ದೇ ಎಂಡ
ಹೆಂಡ್ರು ನೋಡಿ ಮುನಿಸ್ಕೊಂಡವ್ಳೆ
ಹಿಡ್ಕೊಂಡವ್ಳೇ ದಂಡ

ಏಕೋ ಚಂದ್ರ ಹೀಂಗ್ಯಾಕಾದೆ
ಹೆಂಡ್ರು ಮುನಿದ್ರಾ ಹೇಂಗೆ?
ಇಷ್ಟೊಂದ್ಯಾಕೆ ಇಳುದೋಗ್ಬುಟ್ಟೆ
ನಂಬೋಕಾಗ್ದು ನಂಗೆ

ಹಿಂದಿನ್ ವಾರ ನೋಡ್ದೇ ನಿನ್ನ
ದುಂಡಾಗಿದ್ದೆ ನೀನು
ಮನೆಯಾಗ್ಮಾಡ್ದೊ ದೋಸೆ ಹಾಂಗೆ
ಅಂದ್ಕೊಂಡಿದ್ದೆ ನಾನು

ಹೆಂಡ್ರು ನಿತ್ಯ ಬೈತಾರೇನು
ನಿತ್ಯಾ ಹೀಂಗೆ ಕೊರಗಿ
ಅರ್ಧಕ್ಕರ್ಧ ಇಳುದೋಗೈತೆ
ನಿನ್ನ ಜೀವ ಸೊರಗಿ

ನೊಂದ್ಕೊಬ್ಯಾಡ ಗಂಡ್ಸು ಅಂದ್ರೆ
ಬಾಳು ನಮ್ದು ಹೀಂಗೆ
ಹೆಂಡ್ರು ಬೈದ್ರೆ ಸುಮ್ಗೇ ಕೂತ್ಕೊ
ನಾನು ಇರೋ ಹಾಂಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಅಂದು ಇಂದು

ಅಂದು ಪಟ್ಟಿಯಲ್ಲೆ ಬರೆದಿಟ್ಟು
ಕೊಳ್ಳುತ್ತಿದ್ದೆವು
ಎಲ್ಲರ ಫೋನ್ ನಂಬರ್
ಬಾಯಿಪಾಠವಾಗುತ್ತಿತ್ತು ಹಲವರ ನಂಬರ್
ಈಗ ಫೋನಿನಲ್ಲೆ ಇರುವುದು ಎಲ್ಲರ
ನಂಬರ್
ಬಾಯಿಗೆ ಬರುತ್ತಿಲ್ಲ ಒಬ್ಬರ ನಂಬರ್

ಅಂದು ನಮ್ಮ ಕಣ್ಣೆ ಕ್ಯಾಮರಾ
ಸೆರೆಹಿಡಿಯುತ್ತಿತ್ತು ಪರಿಸರದ
ಸುಂದರ ದೃಶ್ಯಗಳ
ಇಂದು ಕೈಯಲ್ಲೆ ಇದೆ ಕ್ಯಾಮರಾ
ಫೋಟೋ ತೆಗೆಯುವ ಭರದಲ್ಲಿ
ಮರೆಯುತ್ತಿರುವೆವು ಪರಿಸರದ
ಸವಿಯುಣ್ಣುವುದ

ಅಂದು ನೆಂಟರು ಮನೆಗೆ ಬಂದರೆ
ಸಂಭ್ರಮವಿತ್ತು
ಮಾಡುತ್ತಿದ್ದೆವು ಮನೆಯಲ್ಲೆ ಸಿಹಿ
ತಿನಿಸುಗಳ
ಇಂದು ಅಪರೂಪಕ್ಕೆ ಯಾರಾದರೂ
ಬಂದರು
ಚಹಾ ಜೊತೆ ಇಡುವೆವು ಅಂಗಡಿ
ತಿನಿಸುಗಳ.

– ಸುವರ್ಣಾ ಭಟ್ಟ


## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವಾವಸು

**26–06–2025 – ಗುರುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರ |
| ಯೋಗ | : ಧ್ರುವ |
| ಕರಣ | : ಭವ |
| ಸೂರ್ಯೋದಯ | : 05:44:31 |
| ಸೂರ್ಯಾಸ್ತ | : 19:15:11 |
| ರಾಹು ಕಾಲ | : 14:11–15:53 |
| ಯಮಘಂಡ ಕಾಲ | : 05:45–07:26 |
| ಗುಳಿಕ ಕಾಲ | : 09:07–10:49 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 25–06–2025**


| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.79 ಅಡಿ |
| ಒಳ ಹರಿವು | 24115 ಕ್ಯುಸೆಕ್ |
| ಹೊರ ಹರಿವು | 197 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 50.315 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1581.52 ಅಡಿ |
| ಒಳ ಹರಿವು | 815 ಕ್ಯುಸೆಕ್ |
| ಹೊರ ಹರಿವು | 2064 ಕ್ಯುಸೆಕ್ |
| ಸಾಮರ್ಥ್ಯ | 5.256 ಟಿಎಂಸಿ |

# ಆಷಾಢ ಮಾಸ ಬಂದೀತವ್ವ, ಅಣ್ಣ ಬರಲಿಲ್ಲ ಕರಿಯಾಕ!

ಆಷಾಢ ಮಾಸ ಬಂದಿತವ್ವ, ಅಣ್ಣ ಬರಲಿಲ್ಲ ಕರಿಯಾಕ, ಸುವ್ವಲಾಲೀ ಸುವ್ವಲಾಲೀ . . . . ಆಷಾಢ ಮಾಸ ಬಂತೆಂದರೆ ಸಾಕು 80–90ರ ದಶಕದ ನಾವೆಲ್ಲ ಈ ಹಾಡನ್ನು ಗುನುಗುತ್ತಲೇ ಇರುತ್ತಿದ್ದೆವು. ಕಾರಣ ಆಷಾಢ ಮಾಸ ಎಲ್ಲರಿಗೂ ಅಷ್ಟು ಮಹತ್ವದಾಗಿತ್ತು. ಭಾರತೀಯ ಪರಂಪರೆಯಲ್ಲಿ ಪ್ರತೀ ದಿನ ಘಳಿಗೆಗೂ ಮಹತ್ವ ಇದ್ದೇ ಇರುತ್ತದೆ. ಹಿಂದೂ ಜ್ಯೋತಿಷ್ಯದ ಪ್ರಕಾರ ಇದು ಅಶುಭ ಮಾಸ. ಹೀಗಾಗಿ, ಆಷಾಢ ಮಾಸ ಪ್ರಾರಂಭವಾದ ಬಳಿಕ ಮದುವೆ, ಗೃಹಪ್ರವೇಶ, ಉಪನಯನ, ವಾಹನ ಮತ್ತು ಜಮೀನು ಕೊಳ್ಳುವುದು, ಹೊಸ ವ್ಯಾಪಾರ ಪ್ರಾರಂಭ ಮುಂತಾದ ಕಾರ್ಯಗಳೆಲ್ಲಾ ನಿಷೇಧವಾಗುತ್ತದೆ!. ಆಷಾಢ ಮಾಸ ನಮ್ಮ ಬದುಕಿಗೆ ಕಾಲಿಡಲಿದೆ. ಈ ಮಾಸ ಆರಂಭವಾದರೆ ಸಾಕು ಯಾರೂ ಒಳ್ಳೆಯ ಕೆಲಸಗಳನ್ನು ಮಾಡಲು ಹಿಂದೇಟು ಹಾಕುತ್ತಾರೆ. ಈ ಅವಧಿಯಲ್ಲಿ ಯಾವುದೇ ಕಾರ್ಯಗಳು ನಡೆಯುವುದಿಲ್ಲ. ಇದಕ್ಕೆ ನೂರಾರು ಕಾರಣಗಳು ಇವೆ. ಆಷಾಢ ಮಾಸದಲ್ಲಿ ಮಳೆಯ ಆರ್ಭಟ ಹೆಚ್ಚಿರುತ್ತಿತ್ತು. ಈ ರೀತಿ ನಿರಂತರವಾದ ಮಳೆ, ಗಾಳಿಯಿಂದ ಸಂಚಾರಕ್ಕೆ ಅಡೆತಡೆ ಉಂಟಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಆಷಾಢ ಮಾಸದಲ್ಲಿ ಶುಭಕಾರ್ಯ ಮಾಡಲು ಅನಾನು ಕೂಲವಾಗಿದ್ದರಿಂದ ಶುಭಕಾರ್ಯ ಮಾಡುವುದನ್ನು ನಿಷೇಧಿಸಿದ್ದರು.



### ಆಷಾಢ ಮಾಸದ ಮಹತ್ವ

- ಈ ಮಾಸದಲ್ಲೇ ಶಿವ ಪಾರ್ವತಿಗೆ ಅಮರತ್ವದ ರಹಸ್ಯ ಹೇಳಿರುವುದು
- ಗಂಗೆ ಭೂಮಿಗೆ ಉತ್ತರಾಭಿಮುಖವಾಗಿ ಹರಿದು ಬಂದಿದ್ದು ಈ ಮಾಸದಲ್ಲಿ.
- ಅನುಸೂಯದೇವಿ ಎಂಬ ಮಹಾ ಪತಿವ್ರತೆ ಈ ಮಾಸದ ನಾಲ್ಕು ಸೋಮವಾರ ಶಿವ ವ್ರತ ಮಾಡಿದ್ದಳು.
- ಶಿವ ಪಾರ್ವತಿಗೆ ಅಮರನಾಥ ಗುಹೆಯಲ್ಲಿ ಅಮರತ್ವದ ಕಥೆ ಹೇಳಿದ್ದು ಇದೇ ಆಷಾಢ ಮಾಸದಲ್ಲಿ. ಅಮರನಾಥನ ಹಿಮಲಿಂಗ ದರ್ಶನ ಪ್ರತಿ ವರ್ಷ ಈ ಸಮಯದಲ್ಲೇ ಆರಂಭವಾಗುತ್ತದೆ
- ಪ್ರಥಮ ಏಕಾದಶಿ ವ್ರತಆರಾಧನೆ ಬರುವುದು ಆಷಾಢದಲ್ಲಿ.
- ಆಷಾಢದ ಶುಕ್ರವಾರಗಳಲ್ಲಿ ಲಕ್ಷ್ಮೀ ಪೂಜೆಯನ್ನು ವಿಶೇಷವಾಗಿ ಆಚರಿಸುವರು. ಆ ದಿನ ಸಂಜೆ ಮನೆ ಮುಂದೆ ದೀಪ ಹಚ್ಚಿಇಡುತ್ತಾರೆ. ಮೈಸೂರು ಪ್ರಾಂತ್ಯಗಳಲ್ಲಿ ಈ ಆಚರಣೆ ನಡೆಯುತ್ತದೆ.
- ಬಲಿ ಚಕ್ರವರ್ತಿ ಶಾಂಡಿಲ್ಯ ವ್ರತ ಪ್ರಾರಂಭ ಮಾಡಿದ್ದು
- ಇಂದ್ರನುಗೌತಮರಿಂದ ಶಾಪ ಪಡೆದ. ಹಾಗೂ ಆಷಾಢದಲ್ಲಿ ನಾಲ್ಕು ಸೋಮವಾರ ಸೋಮೇಶ್ವರ ಜಯಂತಿ ವ್ರತವನ್ನು ಮಾಡಿ ಶಾಪ ವಿಮೋಚನೆ ಪಡೆದ.
- ಸುಮಂಗಲಿಯರು ದೀರ್ಘಕಾಲದ ಮಾಂಗಲ್ಯ ಪ್ರಾಪ್ತಿಗಾಗಿ ಆಷಾಢ ಮಾಸದ ಅಮಾವಾಸ್ಯೆಯ ಸಂಜೆ ಜ್ಯೋತಿ ಭೀಮೇಶ್ವರ ವ್ರತವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ.
- ಆಷಾಢ ಹುಣ್ಣಿಮೆ ದಿನ ಗುರು ಪೂರ್ಣಿಮೆಯನ್ನುಎಲ್ಲಾ ಮಠ ಮಂದಿರಗಳಲ್ಲಿ ಆಚರಿಸಿ ಚಾತುರ್ಮಾಸ್ಯ ವ್ರತವನ್ನು ಪ್ರಾರಂಭ ಮಾಡುತ್ತಾರೆ.
- ಆಷಾಢ ಮಾಸದ ಎಲ್ಲಾ ಶುಕ್ರವಾರವೂ ಲಕ್ಷ್ಮಿದೇವಿಯನ್ನು ವಿಶೇಷವಾಗಿ ಆರಾಧಿಸಲಾಗುತ್ತದೆ. ಈ ದಿನ ಸಂಜೆ ಮಹಿಳೆಯರು ಮನೆ ಮುಂದೆ ದೀಪವನ್ನು ಹಚ್ಚಿದೇವರನ್ನು ಭಕ್ತಿಯಿಂದ ಪ್ರಾರ್ಥಿಸುತ್ತಾರೆ.
- ಮೈಸೂರಿನ ಚಾಮುಂಡೇಶ್ವರಿ ದೇವಿಯು ಜನಿಸಿದ್ದು ಕೂಡ ಇದೇ ತಿಂಗಳಲ್ಲಿ ಎಂದು ಹೇಳಲಾಗುತ್ತದೆ. ಆದ್ದರಿಂದ ಆಷಾಢ ಮಾಸವು ಮೈಸೂರಿನ ಜನತೆಗೆ ತುಂಬಾನೇ ವಿಶೇಷವಾಗಿದೆ.



ಡಾ. ಪ್ರಸನ್ನದೇವರ ಮಠ
ಅನಿಲಕುಮಾರ್, ಮಾಗಳ

Scan For Digital Colourful
HAMPI TIMES E-paper

### ಆಷಾಢ ಮಾಸದಲ್ಲಿ ಪೂಜೆ :

ಈ ಮಾಸದಲ್ಲಿ ವಿಪರೀತ ಮಳೆಯಾಗುತ್ತದೆ. ಶುಭ ಸಮಾರಂಭಗಳನ್ನು ಹಮ್ಮಿಕೊಳ್ಳ ಲಾಗುವುದಿಲ್ಲ. ಇನ್ನು ಹೊಸದಾಗಿ ಮದುವೆಯಾದ ದಂಪತಿಗಳಲ್ಲಿ ವಧುವು ಈ ಮಾಸ ಮುಗಿಯುವವರೆಗೆ ತನ್ನತವರು ಮನೆಯಲ್ಲೇ ಇರುತ್ತಾಳೆ. ಆದರೆ ಈ ಮಾಸವು ದೇವಾನು ದೇವತೆಗಳಿಗೆ ಅತ್ಯಂತ ಶುಭ ಮಾಸವಾಗಿದೆ. ಈ ಮಾಸವು ಶುಭ ಸಮಾರಂಭಗಳನ್ನು ಹಮ್ಮಿಕೊಳ್ಳಲು ಸೂಕ್ತವಲ್ಲದಿದ್ದರೂ ಕೂಡದೇವರ ಆರಾಧನೆ, ವ್ರತ ಮತ್ತುಜಪ – ತಪಗಳನ್ನು ಮಾಡಲು ಯೋಗ್ಯವಾದ ಮಾಸವೆಂದು ಹೇಳಲಾಗುತ್ತದೆ.

### ಆಷಾಢ ಮಾಸಕ್ಕೆ ಗಂಡ ಹೆಂಡತಿ ಒಟ್ಟಿಗೆ ಇರುವಂತಿಲ್ಲಯಾಕೆ?:

ಆಷಾಢ ಮಾಸವನ್ನುಅಶುಭವೆಂದೇ ಪರಿಗಣಿಸಲಾಗುತ್ತದೆ. ಹೀಗಾಗಿ ಈ ಮಾಸದಲ್ಲಿ ಶುಭ ಕಾರ್ಯಗಳು ನಡೆಯು ವುದಿಲ್ಲ. ಅದಲ್ಲದೇ, ಹೊಸದಾಗಿ ಮದುವೆಯಾದ ದಂಪತಿಗಳಿಬ್ಬರೂ ಪರಸ್ಪರ ದೂರವಿರಬೇಕಾದ ಕಾರಣ ಹೆಣ್ಣು ಮಕ್ಕಳು ಗಂಡನ ಮನೆಯಿಂದ ತವರು ಮನೆಗೆ ತೆರಳುತ್ತಾರೆ. ಹಾಗಾದ್ರೆ ಈ ಆಚರಣೆಯ ಹಿಂದಿರುವ ಕಾರಣವೇನು ಎನ್ನುವ ಸಂಪೂರ್ಣ ಮಾಹಿತಿ ಇಲ್ಲಿದೆ. ಈ ಸಮಯದಲ್ಲಿ ಗಂಡ ಹೆಂಡತಿ ಸೇರಿ ಹೆಣ್ಣು ಗರ್ಭವತಿಯಾದರೆ, ಚೈತ್ರ ಮಾಸದಲ್ಲಿ ಮಗುವಿಗೆ ಜನ್ಮ ನೀಡಬಹುದು. ಈ ಏಪ್ರಿಲ್ ತಿಂಗಳಿನಲ್ಲಿ ಉಷ್ಣಾಂಶ ಹೆಚ್ಚಾಗಿರುತ್ತದೆ. ಇದರಿಂದ ತಾಯಿ ಹಾಗೂ ಮಗುವಿಗೆ ಆರೋಗ್ಯ ಸಮಸ್ಯೆಗಳು ಕಾಡಬಹುದು ಎನ್ನುವ ವೈಜ್ಞಾನಿಕ ಕಾರಣವು ಇದೆ. ಅಷ್ಟೇ ಅಲ್ಲದೇ ಈ ಆಷಾಢ ತಿಂಗಳಿನಲ್ಲಿ ರೈತಾಪಿ ವರ್ಗಕ್ಕೆ ಕೆಲಸಗಳು ಸ್ವಲ್ಪ ಹೆಚ್ಚಾಗಿರುತ್ತದೆ. ಈ ಸಮಯದಲ್ಲಿ ಹೊಸದಾಗಿ ಮದುವೆಯಾದ ಜೋಡಿಗಳು ಜೊತೆಗಿದ್ದರೆ, ಪತಿಯು ಪತ್ನಿಯ ಜೊತೆಗೆ ಸಮಯ ಕಳೆಯಬಹುದು. ಹೀಗಾದಾಗ ಕೃಷಿ ಕೆಲಸಗಳು ಪೂರ್ಣ ಗೊಳ್ಳದೇ ಇರಬಹುದು. ಆತನು ಸಂಪೂರ್ಣವಾಗಿ ಕೆಲಸದಲ್ಲಿ ತೊಡಗಿಕೊಳ್ಳಲಿ ಎನ್ನುವ ಕಾರಣಕ್ಕೆ ಆಷಾಢದಲ್ಲಿ ತವರಿಗೆ ಹೆಣ್ಣು ಮಕ್ಕಳನ್ನು ಕಳುಹಿಸಿ ಕೊಡುತ್ತಾರೆ.

### ದೂರವಿರುವಅತ್ತೆ ಸೊಸೆ ನಡುವೆ ಪ್ರೀತಿಹೆಚ್ಚುತ್ತೆ :

ಇನ್ನೊಂದು ನಂಬಿಕೆಯ ಪ್ರಕಾರ ಆಷಾಢ ಮಾಸದಲ್ಲಿ ಹೊಸದಾಗಿ ಮದುವೆಯಾದ ಹೆಣ್ಣು ತನ್ನ ಅತ್ತೆಯೊಂದಿಗಿದ್ದರೆ ಜಗಳಗಳು ಉಂಟಾಗುತ್ತದೆ. ಹೀಗಾಗಿ ಸೊಸೆಯನ್ನು ಒಂದು ತಿಂಗಳ ಕಾಲ ತವರು ಮನೆಗೆ ಕಳುಹಿಸಲಾಗುತ್ತದೆ. ಇಬ್ಬರೂ ದೂರವಿದ್ದರೆ ಅತ್ತೆ ಸೊಸೆಯ ನಡುವೆ ಪ್ರೀತಿ ಕಾಳಜಿಯು ಹೆಚ್ಚುತ್ತದೆ. ಅದಲ್ಲದೇ ತಾಯಿ ಮಗಳು ಸಂಬಂಧವು ಗಟ್ಟಿಯಾಗುತ್ತದೆ ಎನ್ನಲಾಗಿದೆ.

**ಮೆಹಂದಿ:** ಹುಡುಗಿಯರು ತಮ್ಮ ಅಂಗೈ ಹಾಗೂ ಪಾದಗಳಿಗೆ ಮೆಹಂದಿ ಹಾಕಿಕೊಳ್ಳುತ್ತಾರೆ. ಸುಂದರ ಡಿಸೈನರ್ ಮೆಹಂದಿಗಳು ಮಹಿಳೆಯರನ್ನು ಹೆಚ್ಚು ಸುಂದರವಾಗಿ ಕಾಣುವಂತೆ ಮಾಡುತ್ತದೆ. ಕಾಲದಲ್ಲಿ ಬದಲಾವಣೆಯಿಂದ ಚರ್ಮದ ಮೇಲೆ ಪರಿಣಾಮ ಗಳುಂಟಾಗಿ ಚರ್ಮ ಕಾಯಿಲೆಗೆ ಕಾರಣಗಳಾಗ ಬಹುದು. ಈ ಹಿನ್ನೆಲೆ ಪಾದ, ಅಂಗೈಗಳಿಗೆ ಮೆಹಂದಿ ಹಾಕಿಕೊಂಡರೆ ಆ ತೊಂದರೆಗಳಿಂದ ಮುಕ್ತಿ ಪಡೆದುಕೊಳ್ಳಬಹುದು.

### ತವರಿನಿಂದ ಹೊರಡುವ ಹೆಣ್ಣಿಗೆ ಕಾಲ್ಗೆಜ್ಜೆಯೇ ಉಡುಗೊರೆ:

ಕೆಲವು ಕಡೆಗಳಲ್ಲಿ ಆಷಾಢದಲ್ಲಿ ತವರಿಗೆ ಬಂದ ಹೆಣ್ಣು ಮಕ್ಕಳು ಕಾಲ್ಗೆಜ್ಜೆ ಧರಿಸಬೇಕು ಎನ್ನುವ ಸಂಪ್ರದಾಯವಿದೆ. ತನ್ನತವರು ಮನೆಯಲ್ಲಿ ಮಗಳು ಓಡಾಡುವಾಗೆಲ್ಲ ಆಕೆಯ ಕಾಲ್ಗೆಜ್ಜೆ ಸದ್ದು ಕೇಳಿಸುತ್ತದೆ. ಆಷಾಢ ಮುಗಿದ ಬಳಿಕ ಗಂಡನ ಮನೆಗೆ ತೆರಳಿದಾಗ ತನ್ನ ಮಗಳ ಕಾಲ್ಗೆಜ್ಜೆ ಸದ್ದುವು ತಾಯಿಗೆ ಮಗಳ ನೆನಪಾಗುವಂತೆ ಮಾಡುತ್ತದೆಯಂತೆ. ಅದಲ್ಲದೇ, ಮಗಳು ಆಷಾಢ ಮುಗಿಸಿ ತನ್ನ ಗಂಡನ ಮನೆಗೆ ಹೊರಡುವ ಹೆಣ್ಣು ಮಗಳಿಗೆ ಗೆಜ್ಜೆಗಳಿಲ್ಲದ ಕಾಲ್‌ಗೆಜ್ಜೆಯನ್ನು ಉಡುಗೊರೆಯಾಗಿ ನೀಡುವ ಸಂಪ್ರದಾಯವಿದೆ. ಮಗಳು ಗಂಡನ ಮನೆಯಲ್ಲಿ ಹೊಂದಾಣಿಕೆಯಿಂದ ಜೀವನ ನಡೆಸಲಿ ಎನ್ನುವುದಾಗಿದೆ.

# ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ ಮಾರಾಟ, ಸಂಗ್ರಹಣೆ, ವಿತರಣೆ–ಬಳಕೆ ನಿಷೇಧ

## ಬಳ್ಳಾರಿ ಜಿಲ್ಲಾ ಪಂಚಾಯತ್ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್ ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ, ಮಾರಾಟ, ಸಂಗ್ರಹಣೆ, ವಿತರಣೆ ಹಾಗೂ ಬಳಕೆ ನಿಷೇಧಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ರಸ್ತೆಗಳಲ್ಲಿ ಮತ್ತು ಕಾಲುವೆಗಳಲ್ಲಿ ಪ್ಲಾಸ್ಟಿಕ್ ಕಸದ ರಾಶಿಗಳು, ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳು ಪರಿಸರ ಹಾಗೂ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಮುಖ್ಯಮಂತ್ರಿಗಳು ತೀವ್ರ ಆತಂಕ ವ್ಯಕ್ತಪಡಿಸಿದ್ದು, ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ ಎಂದು ಜಿಪಂ ಸಿಇಒ ಅವರು ತಿಳಿಸಿದ್ದಾರೆ.

ಪರಿಸರ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 5 ರಡಿ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು 2016, 2021 ರ ತಿದ್ದುಪಡಿ ಅನ್ವಯ ಕ್ಯಾರಿ ಬ್ಯಾಗ್ ಇತ್ಯಾದಿಗಳಲ್ಲಿ 120 ಮೈಕ್ರಾನ್ ಗಿಂತ ಕಡಿಮೆ ಗಾತ್ರದ ಎಲ್ಲಾ ಕೆಲವು ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ, ಮಾರಾಟ, ಸಂಗ್ರಹಣೆ, ವಿತರಣೆ ಹಾಗೂ ಬಳಕೆ ನಿಷೇಧಿಸಲಾಗಿದೆ.



ಹಾಗಾಗಿ ಸ್ಥಳೀಯ ಸಂಸ್ಥೆಗಳ ತಾಲ್ಲೂಕು, ಗ್ರಾಮ ಪಂಚಾಯತಿಗಳ ಮೂಲಕ ರಸ್ತೆ ಮತ್ತು ಕಾಲುವೆಗಳಲ್ಲಿ ಪ್ಲಾಸ್ಟಿಕ್ ಕಸ ವಿಲೇವಾರಿ ತಡೆಗಟ್ಟುವುದು ಹಾಗೂ ಉಲ್ಲಂಘಿಸುವವರಿಗೆ ದಂಡ ವಿಧಿಸುವ ಕಾರ್ಯಾಚರಣೆ ತ್ವರಿತವಾಗಿ ಸಂಬಂಧಿಸಿದ ಅಧಿಕಾರಿಗಳು ನಡೆಸಬೇಕು. ಆಯಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಏಕ ಬಳಕೆಯ ಪ್ಲಾಸ್ಟಿಕ್ ತಯಾರಕರು ಹಾಗೂ ಮಾರಾಟಗಾರರ ಮೇಲ್ವಿಚಾರಣೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಕಚೇರಿಗಳು ಮತ್ತು ಘಟಕಗಳಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ತಕ್ಷಣದಿಂದಲೇ ನಿಷೇಧಿ ಸಲಾಗಿದೆ ಎಂದು ಜಿಪಂ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಬೆಳೆಗಳಿಗೆ ವಿಮೆ ನೋಂದಣಿಗೆ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸಕ್ತ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಯಡಿ ಮುಂಗಾರು ಹಂಗಾಮಿನ ಬೆಳೆಗಳ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ತಮ್ಮ ಬೆಳೆಗಳಿಗೆ ಬ್ಯಾಂಕುಗಳಲ್ಲಿ ವಿಮೆಗೆ ನೋಂದಾಯಿಸಿ ಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಮುಂಗಾರು ಹಂಗಾಮಿನ ಗ್ರಾಮ ಪಂಚಾಯಿತಿ ಮಟ್ಟದ ಬೆಳೆಗಳಾದ ಭತ್ತ, ಮುಸುಕಿನ ಜೋಳ ಹಾಗೂ ಹೋಬಳಿ ಮಟ್ಟದ ಮುಂಗಾರು ಹಂಗಾಮಿನ ಬೆಳೆಗಳಾದ ಜೋಳ, ರಾಗಿ, ಸಜ್ಜೆ, ನವಣೆ, ತೊಗರಿ, ಹುರುಳಿ, ಸೂರ್ಯಕಾಂತಿ, ಎಳ್ಳು, ಹತ್ತಿ, ನೆಲಗಡಲೆ, ಈರುಳ್ಳಿ, ಭತ್ತ, ಕೆಂಪು ಮೆಣಸಿನಕಾಯಿ ಜಿಲ್ಲೆಯ ಬೆಳೆಗಳಾಗಿವೆ.

**ವಿವಿಧ ಬೆಳೆಗಳ ಬೆಳೆ ವಿಮೆಗೆ ಕೊನೆಯ ದಿನ:** ಎಳ್ಳು–ಜುಲೈ 15 ಕೊನೆಯ ದಿನ. ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನಕಾಯಿ, ಈರುಳ್ಳಿ ಬೆಳೆಗಳಿಗೆ ಜುಲೈ 31 ಕೊನೆಯ ದಿನ. ಭತ್ತ, ತೊಗರಿ, ರಾಗಿ, ನವಣೆ, ಹುರುಳಿ, ನೆಲಗಡಲೆ, ಸಜ್ಜೆ ಬೆಳೆಗಳಿಗೆ ಆಗಸ್ಟ್ 16 ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ನೋಂದಾಯಿಸಿಕೊಳ್ಳಲು ಸ್ಥಳೀಯ ಬ್ಯಾಂಕ್‌ಗಳು ಅಥವಾ ಸಾರ್ವಜನಿಕ ಸೇವಾ ಕೇಂದ್ರ ಅಥವಾ ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಸಂಪರ್ಕಿಸಬಹುದು.

ಬೆಳೆ ಸಾಲ ಪಡೆದ ರೈತರು ಇಚ್ಛೆ ಪಡೆಯದೇ ಇದ್ದಲ್ಲಿ ತಮ್ಮ ವ್ಯಾಪ್ತಿಯ ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೊಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದ್ದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರಿಗೆ ಬೆಳೆ ವಿವರ ದಾಖಲಿಸಲು ಅವಕಾಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ತಾಲ್ಲೂಕಿನ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದಾರೆ.

2025–26 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಆರಂಭವಾಗಿದ್ದು, ಕಳೆದ ಬಾರಿಯಂತೆ ಈ ಬಾರಿಯೂ ಸಹ ಬೆಳೆ ಸಮೀಕ್ಷೆ ಕಾರ್ಯದಲ್ಲಿ ರೈತರು ಸ್ವತ: ತಮ್ಮ ಜಮೀನಿನಲ್ಲಿ ತಾವು ಬೆಳೆದ ಬೆಳೆಯ ವಿವರ ದಾಖಲಿಸಬಹುದು.

ಬೆಳೆ ವಿವರ ನಮೂದಿಸಲು ಮೊಬೈಲ್ ಆಪ್ ಬಳಸಬಹುದಾಗಿದ್ದು, ಗೂಗಲ್ ಪ್ಲೇ–ಸ್ಟೋರ್‌ನಿಂದ "ಮುಂಗಾರು ರೈತರ ಬೆಳೆ ಸಮೀಕ್ಷೆ 2025–26" ಎಂಬ ಹೆಸರಿನ ಮೊಬೈಲ್ ಆಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಮೊಬೈಲ್ ಆಪ್ ಬಳಕೆ ಮಾಡುವ ರೀತಿಯನ್ನು ರೈತರಿಗೆ ತಿಳಿಸಲು ಪ್ರತಿ ಗ್ರಾಮದಲ್ಲಿ ನುರಿತ ಖಾಸಗಿ ನಿವಾಸಿಗಳನ್ನು ನೇಮಿಸಲಾಗಿದೆ ಎಂದು ತಿಳಿಸಿದ್ದಾರೆ.

*ವಿಧಾನ:*

ಗೂಗಲ್ ಪ್ಲೇ–ಸ್ಟೋರ್‌ನಲ್ಲಿ "ಮುಂಗಾರು ರೈತರ ಬೆಳೆ ಸಮೀಕ್ಷೆ 2025–26" ಎಂದು ಹುಡುಕಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಬಳಿಕ ಆಧಾರ್ ವಿವರ ಮತ್ತು ಮೊಬೈಲ್ ನಂಬರ್ ಅನ್ನು ನಮೂದಿಸಿ ಸಕ್ರಿಯಗೊಳಿಸಲು ಓಟಿಪಿ ನಮೂದಿಸಬೇಕು.

ಮೊಬೈಲ್ ಆಪ್‌ನಲ್ಲಿ ಮೊದಲು ಮಾಸ್ಟರ್ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ನಂತರ ತಮ್ಮ ಜಮೀನಿನ ಸರ್ವೆ ನಂಬರ್‌ಗಳನ್ನು ಸೇರಿಸಿಕೊಳ್ಳಬೇಕು. ಮುಂದಿನ ಹಂತದಲ್ಲಿ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ದಾಖಲಿಸಬೇಕು.

ಈ ಹಂತದಲ್ಲಿ ರೈತರು ತಮ್ಮ ಜಮೀನಿನಲ್ಲಿ ಪಾಳು ಬಿದ್ದಿರುವ ಪ್ರದೇಶ, ಈಗಾಗಲೇ ಕಟಾವಾದ ಪ್ರದೇಶ, ಕೃಷಿಯೇತರ ಬಳಕೆಗೆ (ಕೊಟ್ಟಿಗೆ, ಕೃಷಿ ಹೊಂಡ, ಮನೆ ಇತರೆ) ಬಳಕೆಯಾದ ಪ್ರದೇಶದ ವಿವರಗಳನ್ನು ಸಹ ದಾಖಲಿಸಬೇಕಾಗುತ್ತದೆ. ರೈತರು ತಾವು ಬೆಳೆದ ಪ್ರತಿ ಬೆಳೆಯ ವಿಸ್ತೀರ್ಣದ ಜೊತೆಗೆ ಪ್ರತಿ ಬೆಳೆಯ ಎರಡು ಛಾಯಚಿತ್ರಗಳನ್ನು ಸೆರೆ ಹಿಡಿದು ಅಪ್ಲೋಡ್ ಮಾಡಬೇಕು.

ಹೀಗೆ ಅಪ್ಲೋಡ್ ಮಾಡಲಾದ ಮಾಹಿತಿಯನ್ನು ಪ್ರತಿಗ್ರಾಮಕ್ಕೆ ನೇಮಿಸಲಾದ ಸರ್ಕಾರಿ ಅಧಿಕಾರಿಗಳು (ಮೇಲ್ವಿಚಾರಕರು) ಪರಿಶೀಲಿಸಿ ರೈತರು ದಾಖಲಿಸಿದ ಬೆಳೆ ವಿವರಕ್ಕೂ, ಛಾಯಚಿತ್ರಕ್ಕೂ ತಾಳೆ ಹೊಂದಿದಲ್ಲಿ ಮಾತ್ರ ಬೆಳೆ ವಿವರವನ್ನು ಅನುಮೋದಿಸುತ್ತಾರೆ.

ಒಂದು ವೇಳೆ ರೈತರು ತಮ್ಮ ಸ್ನೇಹಿತರು ಅಥವಾ ಸಂಬಂಧಿಕರಿಗೆ ಸಹಾಯ ಮಾಡುವುದಾದರೆ ಅವರ ಸರ್ವೆ ನಂಬರ್‌ಗಳನ್ನು ಸಹ ತಮ್ಮ ಮೊಬೈಲ್ ಆಪ್‌ನಲ್ಲಿ ಸೇರಿಸಿಕೊಂಡು ಅವರ ಜಮೀನಿನ ವಿವರ ದಾಖಲಿಸಲೂ ಸಹ ಮೊಬೈಲ್‌ಆಪ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

*ಉಪಯೋಗ:*

ಹೀಗೆ ಸಂಗ್ರಹಿಸಲಾದ ಬೆಳೆ ಸಮೀಕ್ಷೆ ಮಾಹಿತಿಯನ್ನು ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್ ಅಡಿ ಪ್ರವಾಹ ಮತ್ತು ಬರಗಾಲ ಸಂದರ್ಭದಲ್ಲಿ ನೀಡುವ ನಷ್ಟ ಪರಿಹಾರ ವಿತರಿಸಲು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಲು, ಬೆಳೆ ವಿಮಾ ಯೋಜನೆಯಡಿ ಬೆಳೆ ವಿವರ ಪರಿಶೀಲಿಸಲು, ಸಾಂಖ್ಯಿಕ ಇಲಾಖೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಬೆಳೆ ವಿಸ್ತೀರ್ಣ ವರದಿ ಕಾರ್ಯದಲ್ಲಿ, ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ.

ಅದೇರೀತಿಯಾಗಿ ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ, ಪಹಣಿಯಲ್ಲಿ ಬೆಳೆ ವಿವರ ದಾಖಲಿಸಲು, ಬ್ಯಾಂಕ್ ಮತ್ತು ವ್ಯವಸಾಯ ಸೇವಾ ಸಹಕಾರಿ ಸಂಘಗಳ ಮುಖಾಂತರ ಬೆಳೆ ಸಾಲ ನೀಡುವ ಸಂದರ್ಭದಲ್ಲಿ ಬೆಳೆ ಪರಿಶೀಲನೆ ಮಾಡಲು ಹಾಗೂ ಮುಂತಾದ ಸರ್ಕಾರದ ಯೋಜನೆಗಳಿಗೆ ಬಳಸಲಾಗುತ್ತದೆ.

ಹಾಗಾಗಿ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ತಾವೇ ಸರ್ಕಾರಕ್ಕೆ ನಿಗಧಿತ ಸಮಯದೊಳಗೆ ವರದಿ ಮಾಡಬೇಕು.

ಹೆಚ್ಚಿನ ಮಾಹಿತಿಗಾಗಿ ಕಂದಾಯ, ಕೃಷಿ, ತೋಟಗಾರಿಕೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಮೈಕ್ರೋ ನ್ಯೂಸ್

### ಗ್ರಾಮ ಆಡಳಿತಾಧಿಕಾರಿ ಹುದ್ದೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಕಂದಾಯ ಘಟಕದ ಕಲ್ಯಾಣ ಕರ್ನಾಟಕ ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ 03 ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡುವ ಸಲುವಾಗಿ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಿದೆ.

ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ 03 ಹುದ್ದೆಗಳಿಗೆ 1:1 ಅನುಪಾತದಲ್ಲಿ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ವೆಬ್‌ಸೈಟ್ ತಿತಿತಿ.ಞoಠಿಠಿಚಿಟ.ಟಿiಛಿ.iಟಿ ರಲ್ಲಿ ಪ್ರಕಟಿಸಲಾಗಿದೆ. ಪಟ್ಟಿ ಕುರಿತಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಮರ್ಥನೀಯ ದಾಖಲಾತಿಗಳೊಂದಿಗೆ ಜೂನ್ 30 ರೊಳಗಾಗಿ ಕೊಪ್ಪಳ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಲಿಖಿತವಾಗಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಎಂದು ಜಿಲ್ಲಾಧಿಕಾರಿಗಳಾದ ಸುರೇಶ ಬಿ.ಇಟ್ನಾಳ ಅವರು ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com




**AFFIDAVIT**

I , LATEEFSAB GONDABAL S/o Yamanoorsab Gondabal, aged 48 years, R/o H.No. 659, Ward No .5 Sardar Galli, Block 6, Koppal- 583231. My minor daughter RUBY FARAHAT's Father's name as **LATEEFSAB GONDABAL**, Mother's name as **AMEENABEE GONDABAL** The above mentioned names are true and correct. Sworn Before Notary Chandrasekhar P Yalgod at hosapete vide Affidavit on 25-6-2025

# ಕೃಷಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಗೆ ರೈತರು ಹೆಚ್ಚು ಒತ್ತು ನೀಡಿ

### ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಹೇಳಿಕೆ | ಪ್ರಮಾಣಪತ್ರ ವಿತರಣಾ ಸಮಾರಂಭ

**ಹಂಪಿ ಟೈಮ್ಸ್ ಕೊಪ್ಪಳ**

ರೈತರು ಕೃಷಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆಗೆ ಒತ್ತು ನೀಡುವ ಮೂಲಕ ಕಡಿಮೆ ರಾಸಾಯನಿಕ ಗೊಬ್ಬರಗಳ ಬಳಕೆ ಮಾಡಬೇಕೆಂದು ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಹೇಳಿದರು.

ಬುಧವಾರದಂದು ಭಾರತ ಸರ್ಕಾರ, ಮ್ಯಾನೇಜ್ ಹೈದ್ರಾಬಾದ್ ಸಮೇತಿ (ಉತ್ತರ), ಕೃಷಿ ವಿಶ್ವವಿದ್ಯಾಲಯ ಧಾರವಾಡ, ಐ.ಸಿ.ಎ.ಆರ್– ಕೃಷಿ ವಿಜ್ಞಾನ ಕೇಂದ್ರ ಕೊಪ್ಪಳ (ಗಂಗಾವತಿ), ಕೃಷಿ ಇಲಾಖೆ ಕೊಪ್ಪಳ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ ಇವರ ಸಹಯೋಗದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತಿಯ ಜೆ. ಹೆಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕೋರ್ಸ್‌ನ ಪ್ರಮಾಣ ಪತ್ರದ ವಿತರಣಾ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಭಾರತ ಹಳ್ಳಿಗಳಿಂದ ಕೂಡಿದ ದೇಶವಾಗಿದ್ದು, ಶೇ.65 ಪ್ರತಿಶತ ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ತರಬೇತಿಯಲ್ಲಿ ತಾವು ಪಡೆದ ಜ್ಞಾನದ ಮಾಹಿತಿಯನ್ನು ರೈತರಿಗೆ ತಿಳಿಸಬೇಕು. ಈ ವರ್ಷ ಕಡಿಮೆ ರಾಸಾಯನಿಕ ಗೊಬ್ಬರ ಬಳಸಿ ಹೆಚ್ಚು ಬೆಳೆಯುವ ರೈತರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ನೀಡಲಾಗುವುದು. ಇನ್ನೂ ಹೆಚ್ಚಿನ ರೀತಿಯಲ್ಲಿ ಚರ್ಚೆಗಳನ್ನು ಬರುವ ದಿನಗಳಲ್ಲಿ ಮಾಡೋಣ. ತಮ್ಮ ತರಬೇತಿಯಿಂದ ರೈತರಿಗೆ ಅನುಕೂಲವಾಗುವುದರ ಜೊತೆಗೆ ಜಿಲ್ಲೆಯ ಆದಾಯವೂ ಹೆಚ್ಚಾಗಬೇಕೆಂದು ಹೇಳಿದರು.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ಶಿವಶಂಕರ ಎನ್. ಮಾತನಾಡಿ ಗಂಗಾವತಿ ಮತ್ತು ಸಿಂಧನೂರು ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಣ್ಣು ಸವಳಾಗಿದೆ. ಹಾಗಾಗಿ ರೈತರಿಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ಬಳಸಬೇಕು ಮತ್ತು ಗೊಬ್ಬರವನ್ನು




ಹಾಕಬೇಕು ಎಂಬುದರ ಕುರಿತು ತಿಳಿಸಬೇಕು. ನಮ್ಮ ವಿಶ್ವವಿದ್ಯಾಲಯದಿಂದ 7 ಜಿಲ್ಲೆಗಳಲ್ಲಿ ಮಣ್ಣಿನ ಪರೀಕ್ಷೆ ಮಾಡಲಾಗುತ್ತಿದೆ. ಮೊಬೈಲ್ ಸಾಯಿಲ್ ಟೆಸ್ಟ್ ಮಾಡಲಾಗುತ್ತಿದೆ. ರೈತರಿಗೆ ಸಮಗ್ರ ಕೃಷಿಯ ಕುರಿತು ಮಾಹಿತಿ ನೀಡಲು ಕಲ್ಯಾಣ ಕೃಷಿ ರೇಡಿಯೋ ನಮ್ಮ ವಿಶ್ವವಿದ್ಯಾಲಯದಿಂದ ದಿನದ 24 ಗಂಟೆಗಳು ಕಾರ್ಯನಿರ್ವಹಿಸುತ್ತಿದೆ. ಇದರ ಉಪಯೋಗವನ್ನು ರೈತರು ಪಡೆದುಕೊಳ್ಳಬೇಕು. ರೈತರಿಗೆ ಬೇಕಾಗುವಷ್ಟು ಮಾತ್ರ ಅವರಿಗೆ ಶಿಫಾರಸ್ಸು ಮಾಡಬೇಕೆಂದು ಹೇಳಿದರು.

ಕೃಷಿ ಮಹಾವಿದ್ಯಾಲಯ ಗಂಗಾವತಿಯ ವಿಶೇಷಾಧಿಕಾರಿ ಡಾ. ಯಂಜೇರಪ್ಪ ಎಸ್.ಟಿ ಮಾತನಾಡಿ, ಭತ್ತ ಮತ್ತು ಟೊಮೆಟೊಗೆ ಝಿಂಕ್ ಬೇಕು. ಯೂರಿಯಾ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದರಿಂದ ಭತ್ತಕ್ಕೆ ಸಾಕಷ್ಟು ರೋಗಗಳು ಬರುತ್ತಿವೆ. ಸಾರಜನಕ ಹೆಚ್ಚಿನ ಪ್ರಮಾಣದಲ್ಲಿ ಆದಾಗ ಹೀಗೆ ಆಗುತ್ತದೆ. ಮಣ್ಣು ಪರೀಕ್ಷೆ ಆಧಾರದ ಮೇಲೆ ಬೆಳೆಗಳಿಗೆ ಗೊಬ್ಬರವನ್ನು ನೀಡಬೇಕು. ರೈತರಿಗೆ ಸಾವಯವ ಗೊಬ್ಬರದ ಕುರಿತು ಮಾಹಿತಿ ನೀಡಬೇಕು. ರಾಸಾಯನಿಕ ಗೊಬ್ಬರ ಅವಶ್ಯವಿದ್ದಷ್ಟು ಮಾತ್ರ ಬಳಸಬೇಕೆಂದು ಹೇಳಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಮಾತನಾಡಿ, ನಮ್ಮ ಜಿಲ್ಲೆಯಲ್ಲಿ 447 ಜನರಿಗೆ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕೋರ್ಸ್ ಪ್ರಮಾಣ ಪತ್ರ ವಿತರಿಸಲಾಗಿದೆ. ಇದು ಎರಡನೇ ಬ್ಯಾಚ್ ಆಗಿದ್ದು, ಇನ್ನೂ 17 ಜನರು ಉಳಿದಿದ್ದಾರೆ. ಇದರ ಉದ್ದೇಶ ನೀರಾವರಿ ಭಾಗದಲ್ಲಿ ಯೂರಿಯಾ ಬಳಕೆ ಹೆಚ್ಚಾಗುತ್ತಿದೆ. ಹಾಗಾಗಿ ಸಮಗ್ರ ಪೋಷಕಾಂಶಗಳು, ಕೀಟ ನಿರ್ವಹಣೆ, ಮಣ್ಣು ಪರೀಕ್ಷೆ, ನಿರ್ವಹಣೆ ಕುರಿತು ತರಬೇತಿ ಕೊಟ್ಟಿದ್ದೇವೆ. ಈಗ ಡಿಎಪಿ ಬಳಕೆ ಕಡಿಮೆಯಾಗಿದೆ ಯೂರಿಯಾ ಬಳಕೆಯೂ ಕಡಿಮೆಯಾಗಬೇಕೆಂದು ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆಯ ವೀರಣ್ಣ ಕಮತರ್ ಮಾತನಾಡಿ, 1970 ರ ದಶಕದಲ್ಲಿ ಕೃಷಿ ಅಧಿಕಾರಿಗಳು ತಮ್ಮ ಜೀಪಿನಲ್ಲಿ ರಸಗೊಬ್ಬರ ತೆಗೆದುಕೊಂಡು ಹಳ್ಳಿಯ ರೈತರಿಗೆ ಕೊಡಲು ಹೋದಾಗ ಅವರು ವಿಷ ಕೊಡಲು ಬಂದಿದ್ದಾರೆ ಎನ್ನುತ್ತಿದ್ದರು. ಇಂದು ರಸಗೊಬ್ಬರಗಳ ಬಳಕೆಯಿಂದ ಆಹಾರ ಉತ್ಪಾದನೆ ಹೆಚ್ಚಾಗಿದೆ, ಆದರೆ ಗುಣಮಟ್ಟಕ್ಕೆ ಬಂದರೆ ನಮ್ಮ ಗಂಗಾವತಿ ಭಾಗದ ಭತ್ತ ವಿಶ್ವಮಟ್ಟದಲ್ಲಿ ರಿಜೆಕ್ಟ್ ಆಗುತ್ತಿದೆ. ನಾವು ಕೃಷಿಯಲ್ಲಿ ಇಂದು ಹೆಚ್ಚಿನ ರಸಾಯನಿಕ ಬಳಕೆ ಮಾಡುತ್ತಿದ್ದು ಇದರಿಂದ ಸಾಕಷ್ಟು ಕ್ಯಾನ್ಸರ್ ಕೇಸುಗಳು ಬರುತ್ತಿವೆ. ರೈತರ ಶ್ರೇಯೋಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕಿದೆ ಎಂದು ಹೇಳಿದರು.

ಸಮಗ್ರ ಪೋಷಕಾಂಶಗಳ ನಿರ್ವಹಣೆ ಕುರಿತು 15 ದಿನಗಳ ತರಬೇತಿ ಪಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಒಟ್ಟು 58 ಜನರಿಗೆ ಪ್ರಮಾಣ ಪತ್ರ ವಿತರಿಸಲಾಯಿತು ಇದರಲ್ಲಿ ಕೊಪ್ಪಳ ಜಿಲ್ಲೆಯ 28 ಜನರು ಹಾಗೂ ವಿಜಯನಗರ ಜಿಲ್ಲೆಯ 30 ಜನರು ಪ್ರಮಾಣ ಪತ್ರಗಳನ್ನು ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ರಾಘವೇಂದ್ರ ಎಲಿಗಾರ, ಹಿರಿಯ ತಾಂತ್ರಿಕ ಅಧಿಕಾರಿ ಜಿ. ನಾರಪ್ಪ, ವಿಜ್ಞಾನಿ (ಬೀಜ ವಿಜ್ಞಾನ) ಡಾ. ರಾಧಾ ಜೆ, ಸೇರಿದಂತೆ ಇತರೆ ಅಧಿಕಾರಿಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೈಟೆಕ್ ಹಾರ್ವೆಸ್ಟರ್ ಹಬ್‌ಗಳ ಸ್ಥಾಪನೆಗೆ ಕೃಷಿ ಇಲಾಖೆಯಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ ಕ್ಷೇತ್ರದಲ್ಲಿ ಯಂತ್ರೋಪಕರಣಗಳ ಬಳಕೆ ಅಧಿಕ ಮಾಡುವ ನಿಟ್ಟಿನಲ್ಲಿ ಕೃಷಿ ಚಟುವಟಿಕೆಗಳಿಗೆ ಆಧುನಿಕ ತಂತ್ರಜ್ಞಾನದ ಬೃಹತ್ ಯಂತ್ರಗಳನ್ನು ಅಳವಡಿಸಿ ಕೊಂಡು, ಸಕಾಲದಲ್ಲಿ ಕೃಷಿ ಕಾರ್ಯಗಳನ್ನು ನೆರವೇರಿಸಲು ಹೈಟೆಕ್ ಹಾರ್ವೆಸ್ಟರ್ ಹಬ್‌ಗಳ (ಕಟಾವು ಕೇಂದ್ರಗಳು) ಸ್ಥಾಪನೆಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಎಂ. ಸೋಮಸುಂದರ ತಿಳಿಸಿದ್ದಾರೆ.

ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ವೈಯಕ್ತಿಕ ಫಲಾನುಭವಿಗಳು ಹಾಗೂ ನೋಂದಾಯಿತ ಸಂಘ ಸಂಸ್ಥೆಗಳು ಎಫ್‌ಪಿಓ ಸಂಸ್ಥೆಗಳು ಯೋಜನೆಗೆ ಅರ್ಹರಾಗಿದ್ದು, ಆಸಕ್ತ ರೈತರು ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಜು.16 ರೊಳಗಾಗಿ ಅರ್ಜಿ ಸಲ್ಲಿಸಬಹುದು.

ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರದ ಆದೇಶವಾಗಿದ್ದು, ಈ ಯಂತ್ರಗಳನ್ನು ಬಾಡಿಗೆಗೆ ನೀಡುವ ಮೂಲಕ ರೈತರು ಹೆಚ್ಚುವರಿ ಆದಾಯ ಪಡೆಯಬಹುದಾಗಿದೆ.

ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಲು ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಸ್ಥಾಪಿಸಬಹುದು.

ಸಾಮಾನ್ಯ ವರ್ಗದ ರೈತರಿಗೆ ಗರಿಷ್ಠ ಶೇ.50 ರಂತೆ ಗರಿಷ್ಟ ರೂ.40 ಲಕ್ಷ ಸಹಾಯಧನ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಗರಿಷ್ಠ ಶೇ.70ರಂತೆ ಹಾಗೂ ಸಂಘ–ಸಂಸ್ಥೆಗಳಿಗೆ ಚಾಲ್ತಿ ಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾ ದಾರ ಸಂಸ್ಥೆ, ಎಫ್‌ಪಿಓಗಳನ್ನೊಳಗೊಂಡಂತೆ ಗರಿಷ್ಠ ಶೇ.70 ರಂತೆ ಗರಿಷ್ಟ ರೂ.50 ಸಹಾಯಧನ ನೀಡಲಾಗುತ್ತದೆ.

ಸಂಘ–ಸಂಸ್ಥೆಗಳು, ಎಫ್‌ಪಿಓಗಳನ್ನೊಳಗೊಂಡಂತೆ ಟ್ರಸ್ಟ್‌ಗಳು ಮಾತ್ರ ಕಂಬೈಂಡ್ ಹಾರ್ವೆಸ್ಟರ್ ಮತ್ತು ಶುಗರ್‌ಕೇನ್ ಹಾರ್ವೆಸ್ಟರ್‌ಗಳನ್ನು ಒಳಗೊಂಡ "ಕೋಂಬೊ ಹಾರ್ವೆಸ್ಟರ್ ಹಬ್" ಗೆ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

ಕೃಷಿ ಯಂತ್ರೋಪಕರಣವಾರು ನಿಗದಿಪಡಿಸಿದ ಗರಿಷ್ಠ ಸಹಾಯಧನವನ್ನು ಒದಗಿಸಲಾಗಲಿದ್ದು, ಸಹಾಯಧನವನ್ನು ಕ್ರೆಡಿಟ್ ಲಿಂಕ್ ಬ್ಯಾಕ್ ಎಂಡೆಡ್ ಸಬ್ಸಿಡಿ ಮುಖಾಂತರ ಬಿಡುಗಡೆ ಮಾಡಲಾಗುತ್ತದೆ.

ಆಯ್ಕೆಯಾದ ಫಲಾನುಭವಿಗಳು ಅಥವಾ ಸಂಘ–ಸಂಸ್ಥೆಗಳು ಕೃಷಿ ಮೂಲಭೂತ ಸೌಕರ್ಯ ನಿಧಿ ಸಾಲದ ನೆರವನ್ನು ಪಡೆಯಲು ಸಹ ಅವಕಾಶವಿರುತ್ತದೆ. ಸಹಕಾರ ಸಂಘಗಳ ನಿಬಂಧನೆಯಂತೆ ಕಂಪನಿ ಕಾಯ್ದೆಯಡಿ ನೊಂದಾಯಿಸಿದ ಸಂಘ–ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತವೆ. ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳ, ಕೃಷಿ ಯಂತ್ರೋಪಕರಣಗಳ ಬ್ಯಾಂಕ್, ರೈತ ಉತ್ಪಾದಕ ಸಂಸ್ಥೆಗಳು, ಇತರೆ ಸಂಘ–ಸಂಸ್ಥೆಗಳು ರಾಜ್ಯಾದ್ಯಂತ ಅರ್ಜಿಗಳನ್ನು ಸಲ್ಲಿಸಬಹುದು.

ಆರು ಅಥವಾ ಒಂಬತ್ತು ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ತಪಾಸಣೆಯಲ್ಲಿ ಸಂಪೂರ್ಣವಾಗಿ ಲೆಕ್ಕ–ಪತ್ರ ಹಾಗೂ ಯಂತ್ರೋಪಕರಣಗಳನ್ನು ಹಾಜರುಪಡಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ದೂ.08392–276224 ಗೆ ಸಂಪರ್ಕಿಸ ಬಹುದು ಎಂದು ತಿಳಿಸಿದ್ದಾರೆ.

# ಕಲಾವಿದರಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಸಂಸ್ಕೃತಿ ಇಲಾಖೆಯಿಂದ ಆಯೋಜಿಸುವ ಚಿಗುರು, ಯುವ ಸೌರಭ, ಸಾಂಸ್ಕೃತಿಕ ಸೌರಭ ಹಾಗೂ ಹಾಡಿರೇ ರಾಗಗಳ–ತೂಗಿರೇ ದೀಪಗಳ ಕಾರ್ಯಕ್ರಮಗಳಿಗೆ ಭಾಗವಹಿಸಲು ಇಚ್ಛಿಸುವ ಕಲಾವಿದರುಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರು ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗುವ 6 ರಿಂದ 14 ವರ್ಷದ ಒಳಗಿನ ಪ್ರತಿಭಾವಂತ ಮಕ್ಕಳಿಗಾಗಿ 'ಚಿಗುರು' ಕಾರ್ಯಕ್ರಮ, 16 ರಿಂದ 30 ವರ್ಷದೊಳಗಿನ ಪ್ರತಿಭಾವಂತ ಯುವ ಕಲಾವಿದರಿಗಾಗಿ 'ಯುವ ಸೌರಭ' ಕಾರ್ಯಕ್ರಮ, ಹಿರಿಯ ಕಲಾವಿದರುಗಳಿಗಾಗಿ 'ಸಾಂಸ್ಕೃತಿಕ ಸೌರಭ' ಕಾರ್ಯಕ್ರಮ ಹಾಗೂ ವಿಶೇಷ ಘಟಕ ಯೋಜನೆಯಡಿ 'ಹಾಡಿರೇ ರಾಗಗಳ–ತೂಗಿರೇ ದೀಪಗಳ' ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದ್ದು, ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಚಿಸುವ ಕಲಾವಿದರುಗಳಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಜಿಲ್ಲೆಯ ಆಸಕ್ತ ಕಲಾವಿದರುಗಳು ಹೊಸಪೇಟೆ ತಾಲೂಕ ಕಚೇರಿ ಕಟ್ಟಡದ ಕೊಠಡಿ ಸಂಖ್ಯೆ 2 ರಲ್ಲಿರುವ ವಿಜಯನಗರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಗೆ ಜುಲೈ.7 ರೊಳಗಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

# ಮಹಾನಗರ ಪಾಲಿಕೆ: ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮಹಾನಗರ ಪಾಲಿಕೆ ವ್ಯಾಪ್ತಿಗೆ ನಿವೇಶನ ರಹಿತ ಮತ್ತು ವಸತಿ ರಹಿತರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) 2.0 ಅಡಿಯಲ್ಲಿ ವಸತಿ ಸೌಲಭ್ಯ ಒದಗಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ವೆಬ್‌ಸೈಟ್ https://pmay-urban.gov.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಜು.15 ಅರ್ಜಿ ಸಲ್ಲಿಸಲು ಕೊನೆಯ ದಿನ.

**ಬೇಕಾದ ದಾಖಲೆಗಳು:** ಅರ್ಜಿದಾರರ ಆಧಾರ್ ಕಾರ್ಡ್ ಮತ್ತು ಕುಟುಂಬದ ಎಲ್ಲಾ ಸದಸ್ಯರ ಆಧಾರ್ ಕಾರ್ಡ್, ವಸತಿ ರಹಿತರಾಗಿದ್ದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು(ಹಕ್ಕುಪತ್ರ, ಕ್ರಯಪತ್ರ, ದಾನಪತ್ರ, ಉಡುಗೊರೆ, ಖಾತಾ), ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, ಬ್ಯಾಂಕ್ ಖಾತೆಯ ವಿವರ, ಆಧಾರ್ ಕಾರ್ಡ್‌ಗೆ ಲಿಂಕ್ ಇರುವ ಮೊಬೈಲ್ ಸಂಖ್ಯೆ, ಪಾನ್ ಕಾರ್ಡ್(ಲಭ್ಯವಿದ್ದಲ್ಲಿ), ನಿಗಧಿತ ನಮೂನೆ(ಅನೆಕ್ಷರ್–2ಎ,2ಬಿ,2ಸಿ) ಯಲ್ಲಿ ಸೆಲ್ಫ್ ಅಂಡರ್‌ಟೆಕಿಂಗ್ ಹೊಂದಿರಬೇಕು.

ಅರ್ಜಿ ಸಲ್ಲಿಸಲು ಸಾಮಾನ್ಯ ಸೇವಾ ಕೇಂದ್ರ ಸೆಂಟರ್‌ಗಳಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಗಡಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಹತ್ತಿರದ ಮಹಾನಗರ ಪಾಲಿಕೆಯ ಆಯುಕ್ತರ ಕಚೇರಿ ಅಥವಾ ದೂ.08392–273479/278168 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಆತ್ಮ ಯೋಜನೆಯಡಿ 2025–26ನೇ ಸಾಲಿನ ತಾಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿ ಮತ್ತು ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ವಿವಿಧ ಕೃಷಿ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆಗೈದಿರುವ ರೈತ/ರೈತ ಮಹಿಳೆಯರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಸಮಗ್ರಕೃಷಿಪದ್ಧತಿ,ಬೆಳೆಪದ್ಧತಿಗಳುಮತ್ತುಬೆಳೆವೈವಿಧ್ಯಕರಣ/ಸಾವಯವ ಕೃಷಿ/ಕೃಷಿ ಯಂತ್ರೋಪಕರಣ ಅಭಿವೃದ್ಧಿ/ನೀರಿನ ಸಮರ್ಥ ಬಳಕೆ ಇನ್ನಿತರೆ ಯಾವುದಾದರೂ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಜಿಲ್ಲೆಯ ಅರ್ಹ ರೈತರು ಕೃಷಿ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಬಹುದು.

ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗೆ ರೈತ ಮತ್ತು ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಹಾಗೂ ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಮಗ್ರ ಬೆಳೆಪದ್ಧತಿ/ ಸಮಗ್ರ ನೀರು ನಿರ್ವಹಣೆ/ಸಾವಯವ ಕೃಷಿ/ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ/ತೋಟಗಾರಿಕೆ/ ಹೈನುಗಾರಿಕೆ/ಕೋಳಿ ಸಾಕಾಣಿಕೆ/ ಮೀನುಗಾರಿಕೆ/ರೇಷ್ಮೆ ಬೇಸಾಯ/ಹೈಟೆಕ್ ಹಸಿರು ಮನೆ ಅಳವಡಿಕೆ/ಕೃಷಿ ಸಂಸ್ಕರಣೆ/ಅರಣ್ಯ ಕೃಷಿ/ಆಡು, ಕುರಿ, ಮೊಲ ಇತ್ಯಾದಿ ಸಾಕಾಣಿಕೆ ಚಟುವಟಿಕೆಗಳಲ್ಲಿ ತೊಡಗಿರಬೇಕು. ಇದಕ್ಕೆ ಸಂಬಂಧಿಸಿದಂತೆ ಅರ್ಜಿಗಳು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿ/ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿದ್ದು, ರೈತರು ಭರ್ತಿಮಾಡಿದ ಅರ್ಜಿಗಳನ್ನು ಜುಲೈ 15 ರೊಳಗಾಗಿ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಸಲ್ಲಿಸಬೇಕು. ಹಚ್ಚಿನ ಮಾಹಿತಿಗಾಗಿ ಜಿಲ್ಲೆಯ ಸಹಾಯಕ ಕೃಷಿ ನಿರ್ದೇಶಕರು/ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಆತ್ಮ ವಿಭಾಗದ ಯೋಜನಾ ನಿರ್ದೇಶಕರಾದ ಟಿ.ಎಸ್. ರುದ್ರೇಶಪ್ಪ ತಿಳಿಸಿದ್ದಾರೆ.

• Admissions
• Requirements
• Firm Branding
• Public Notice
• Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES VIJAYANAGARA

HAMPI TIMES Kannada Daily
Print & Digital News Paper

BOOK NOW!
Scan to Read

• Obituary
• Remembrance
• Birthday wish ads
• Events Display &
• Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038